# ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 41 ಅಕ್ಟೋಬರ್ 17, 1982 ಬೆಲೆ 60 ಪೈಸೆ


## ಸಿ. ಐ. ಟಿ. ಯು. ಶ್ರದ್ಧಾಂಜಲಿ

ಅರ್ಮುಗಂ ಗೂಂಡಾಗಳಿಂದ ಸೆಪ್ಟೆಂಬರ್ 30 ರಂದು ಕೊಲೆಯಾದ ಕಾಂ| ಆರೋಕ್ಯದಾಸ್ ಅವರಿಗೆ ಸಿ. ಐ. ಟಿ. ಯು. ರಾಜ್ಯ ಸಮಿತಿ ತನ್ನ ಶ್ರದ್ಧಾಂಜಲಿ ಸಲ್ಲಿಸಿದೆ.

ಅಕ್ಟೋಬರ್ 10 ರಂದು, ಸಿ.ಐ.ಟಿ.ಯು. ರಾಜ್ಯ ಸಮಿತಿಯ ಉಪಾಧ್ಯಕ್ಷ ಕಾಂ| ಎನ್. ಕೆ. ಉಪಾಧ್ಯಾಯ ಮತ್ತು ಪ್ರಧಾನ ಕಾರ್ಯದರ್ಶಿ ಕಾಂ| ಸಿ. ನಂಜುಂಡಪ್ಪ ಅವರು ಕೆ.ಜಿ.ಎಫ್.ಗೆ ತೆರಳಿ ದಿವಂಗತ ಕಾಂ| ಆರೋಕ್ಯದಾಸ್ ಅವರ ಮನೆಗೆ ಭೇಟಿ ನೀಡಿ, ಅವರ ತಾಯಿ ಮತ್ತು ಪತ್ನಿಗೆ ಸಾಂತ್ವನ ನೀಡಿದರು. ಸಿ.ಐ.ಟಿ.ಯು. ಪರವಾಗಿ ಸಂತಾಪ ವ್ಯಕ್ತಪಡಿಸಿದರು.

ಕಾಂ| ಆರೋಕ್ಯದಾಸ್‌ರ ಕೊಲೆಯನ್ನು ಖಂಡಿಸಲು ಹಾಗೂ ಕೊಲೆಗಡುಕರಿಗೆ ಯೋಗ್ಯ ಶಿಕ್ಷೆಯಾಗಬೇಕೆಂದೂ, ಕೊಲೆಗೆ ಮೂಲಕಾರಣರಾದ ಶಾಸಕ ಅರ್ಮುಗಂರನ್ನು ಬಂಧಿಸಬೇಕೆಂದು ಒತ್ತಾಯಿಸಲು 18-10-82 ರಂದು ರಾಜ್ಯದಾದ್ಯಂತ 'ಪ್ರತಿಭಟನೆ ದಿನ' ನಡೆಸಲು ಸಿ.ಐ.ಟಿ.ಯು. ರಾಜ್ಯ ಸಮಿತಿ ಕರೆ ನೀಡಿದೆ.

### ವಿರೋಧ ಪಕ್ಷಗಳ ಆರೋಪ

# ಹದಗೆಟ್ಟ ಪರಿಸ್ಥಿತಿಗೆ ಅಸಮರ್ಪಕ ಆಡಳಿತವೇ ಕಾರಣ

ರಾಜ್ಯದ ಆರು ಪ್ರಮುಖ ರಾಜಕೀಯ ಪಕ್ಷಗಳು ಮುಖ್ಯ ಮಂತ್ರಿ ಆರ್. ಗುಂಡೂರಾವ್ ಅವರಿಗೆ ಅಕ್ಟೋಬರ್ 12 ರಂದು ಸಂಯುಕ್ತವಾಗಿ ಐದು ಬೇಡಿಕೆಗಳ ಪಟ್ಟಿ ಸಲ್ಲಿಸಿ, ತಮ್ಮ ನಿರ್ಧಾರವನ್ನು ತಿಳಿಸಲು ಒಂದು ವಾರದ ಗಡುವು ನೀಡಿವೆ.

"ಕಳೆದ ಕೆಲವು ತಿಂಗಳಿಂದೀಚೆ ರಾಜ್ಯದ ಪರಿಸ್ಥಿತಿ ದಿನದಿಂದ ದಿನಕ್ಕೆ ಹದಗೆಡುತ್ತಿದ್ದು, ಈ ಕುರಿತು ಸರಕಾರ ಯಾವುದೇ ನಿರ್ದಿಷ್ಟ ಕ್ರಮಗಳನ್ನು ಅನುಸರಿಸಿಲ್ಲ. ಇದಕ್ಕೆ ಗುಂಡೂರಾವ್ ಸರಕಾರದ ಅಸಮರ್ಪಕ ಆಡಳಿತವೇ ಸಂಪೂರ್ಣ ಹೊಣೆ."

"ಯಾವುದೇ ಕ್ಷೇತ್ರದಲ್ಲೂ ಪ್ರಗತಿಯನ್ನು ಸಾಧಿಸಲಾಗಿಲ್ಲ. ಪ್ರಗತಿಯನ್ನು ಸಾಧಿಸುವ, ಸಾಮಾಜಿಕ ನ್ಯಾಯ ಪರಿಪಾಲಿಸುವ ಆಶ್ವಾಸನೆಯನ್ನು ಗುಂಡೂರಾವ್ ಅಧಿಕಾರ ಸ್ವೀಕರಿಸುವ ಮುನ್ನ ನೀಡಿದ್ದರು. ಹದಗೆಟ್ಟಿರುವ ಆಡಳಿತದ ಕುರಿತು ಮುಖ್ಯ ಮಂತ್ರಿಗೆ ಎಚ್ಚರಿಕೆ ನೀಡಲು ವಿರೋಧ ಪಕ್ಷಗಳು ಈ ಹಿಂದೆಯೂ ಯತ್ನಿಸಿದ್ದವು. ಈ ಪರಿಸ್ಥಿತಿಗೆ ನಿದರ್ಶನವೆಂದರೆ—ಸಂಪೂರ್ಣ ಕುಸಿದು ಬಿದ್ದಿರುವ ಕಾನೂನು ಮತ್ತು ಸುವ್ಯವಸ್ಥೆ. ಅಪರಾಧಗಳ ಸಂಖ್ಯೆ ಗಣನೀಯವಾಗಿದು ಕಳ್ಳತನ, ದರೋಡೆ, ಲೂಟಿ, ಕೊಲೆ, ದೊಂಬಿ ಇವೆಲ್ಲ ದಿನ ನಿತ್ಯದ 'ಮಾಮೂಲಿ' ಘಟನೆಗಳಾಗಿವೆ."

"ಗುಂಡೂರಾಯರ ಆಡಳಿತ ಅವಧಿಯಲ್ಲಿ ಅನೇಕ ಗೋಲಿಬಾರ್ ಪ್ರಕರಣಗಳು ನಡೆದಿದ್ದು, ಸತ್ತವರ ಸಂಖ್ಯೆ ನೂರಕ್ಕೂ ಮಿಕ್ಕಿದೆ. ಪೋಲೀಸ್ ಪಡೆಯನ್ನು ನಾಗರೀಕ ಹಕ್ಕುಗಳನ್ನು ಸದೆಬಡೆಯಲು ಧಾರಾಳವಾಗಿ ಉಪಯೋಗಿಸಲಾಗುತ್ತಿದೆ. ಸಮಾಜದ ಎಲ್ಲಾ ವಿಭಾಗಳ ಜನತೆ ಪೋಲೀಸ್ ದಬ್ಬಾಳಿಕೆಗೆ ಈಡಾಗಿವೆ."

ಪರಿಸ್ಥಿತಿಯ ಗಂಭೀರತೆಯ ಬಗ್ಗೆ ಮುಖ್ಯ ಮಂತ್ರಿಯ ಗಮನ ಸೆಳೆಯಲು ಆರು ವಿರೋಧ ಪಕ್ಷಗಳ ನಾಯಕರು ಜಂಟಿಯಾಗಿ ಬರೆದಿರುವ ಪತ್ರದ ಸಾರಾಂಶವಿದು.

### ಬೇಡಿಕೆಗಳು:

ರೈತರಿಗೆ ಮತ್ತು ಕೃಷಿ ಕಾರ್ಮಿಕರಿಗೆ ಮುಖ್ಯ ಮಂತ್ರಿಗಳು ನೀಡಿರುವ ಭರವಸೆಗಳನ್ನು ಈಡೇರಿಸಬೇಕೆಂಬ ಬೇಡಿಕೆಯೂ ಸೇರಿ ಐದು ಬೇಡಿಕೆಗಳ ಪಟ್ಟಿಯನ್ನು ಮುಖ್ಯ ಮಂತ್ರಿಗೆ ಸಲ್ಲಿಸಲಾಗಿದೆ.

ಕೆ.ಜಿ.ಎಫ್., ಮಳವಳ್ಳಿ, ಬೆಂಗಳೂರು ಮತ್ತು ದೊಡ್ಡಹಳ್ಳಿಗಳಲ್ಲಿ ನಡೆದ ಪೋಲೀಸ್ ಗೋಲಿಬಾರ್ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು;

ಸಾರ್ವಜನಿಕ ಉದ್ದಿಮೆ ವಲಯಗಳ ಕಾರ್ಮಿಕರ ಮುಷ್ಕರ, ರೈತ ಚಳುವಳಿ, ವಿದ್ಯಾರ್ಥಿ ಚಳುವಳಿ ಮತ್ತು ಭಾಷಾ ಸತ್ಯಾಗ್ರಹಗಳಲ್ಲಿ ಹೂಡಿರುವ ಎಲ್ಲಾ ಪೋಲೀಸ್ ಮೊಕದ್ದಮೆಗಳನ್ನು ವಾಪಸ್ ಪಡೆಯಬೇಕು;

ಸರ್ಕಸ್ ದುರಂತಕ್ಕೆ ಸಂಭಂಧಿಸಿದ ಮತ್ತಿತರ ಆಯೋಗಳ, ರೋಲರ್ ಫ್ಲೋರ್ ಮಿಲ್ ಲೈಸೆನ್ಸ್‌ಗಳಿಗೆ ಸಂಬಂಧಿಸಿದ ಸಿ.ಬಿ.ಐ. ವರದಿ, 'ಕೆಲಸಕ್ಕಾಗಿ ಆಹಾರ' ಯೋಜನೆ ಸಿ. ಓ. ಡಿ. ವರದಿ ಮುಂತಾದವುಗಳನ್ನು ಬಹಿರಂಗ ಪಡಿಸಬೇಕು;

ರಾಜ್ಯದಲ್ಲಿ ಸಾರ್ವಜನಿಕರಿಗೆ ರಕ್ಷಣೆ ನೀಡಲು ನಿಷ್ಪಕ್ಷಪಾತವಾಗಿ ವರ್ತಿಸಬಲ್ಲ ಪೋಲೀಸ್ ವ್ಯವಸ್ಥೆಯನ್ನು ರೂಪಿಸಬೇಕು.

ಪತ್ರಕ್ಕೆ ವಿಧಾನ ಮಂಡಲದ ವಿರೋಧ ಪಕ್ಷದ ನಾಯಕರುಗಳ ಜೊತೆಗೆ ಈ ಕೆಳಗಿನ ಮುಖಂಡರು ಸಹಿ ಹಾಕಿದ್ದಾರೆ: ಕಾಂ| ಎಂ. ಕೆ. ಭಟ್ (ಸಿ.ಪಿ.ಐ [ಎಂ]), ಬಿ.ವಿ. ಕಕ್ಕಿಲ್ಲಾಯ (ಸಿ.ಪಿ.ಐ.), ಶ್ರೀ ಎಸ್. ಆರ್. ಬೊಮ್ಮಾಯಿ (ಜನತಾ), ಅಬ್ದುಲ್ ನಜೀರ್ (ಕ್ರಾಂತಿರಂಗ), ಶ್ರೀ ಭಾವುರಾವ್ ದೇಶಪಾಂಡೆ (ಬಿ. ಜೆ. ಪಿ.) ಮತ್ತು ತುಳಸೀ ದಾಸಪ್ಪ (ಕಾಂಗ್ರೆಸ್-ಎಸ್).

ಮುಖ್ಯ ಮಂತ್ರಿಗಳಿಂದ ಬರುವ ಉತ್ತರವನ್ನು ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳ್ಳಲು ವಿರೋಧ ಪಕ್ಷಗಳ ಪ್ರತಿನಿಧಿಗಳಿರುವ ಜಂಟಿ ಕ್ರಿಯಾ ಸಮಿತಿಯೊಂದನ್ನು ರಚಿಸಲಾಗಿದೆ.

ಬೇಡಿಕೆ ಪತ್ರ ಸಲ್ಲಿಸುವ ಮೊದಲು ಅಕ್ಟೋಬರ್ 11 ರಂದು ವಿರೋಧ ಪಕ್ಷಗಳ ಪ್ರತಿನಿಧಿಗಳು ಸಭೆ ಸೇರಿದ್ದರು.

ಸರಕಾರದ ಜನ ವಿರೋಧಿ ಕ್ರಮಗಳನ್ನು ವಿರೋಧಿಸಲು ವಿರೋಧ ಪಕ್ಷಗಳು ಪ್ರಥಮ ಹೆಜ್ಜೆ ಇಟ್ಟದ್ದು ಸ್ವಾಗತಾರ್ಹ ಅಂಶ.

### ಪಂಜಾಬ್ ಪರಿಸ್ಥಿತಿ ಕುರಿತು ಪ್ರಧಾನಿ ಶ್ರೀಮತಿ ಗಾಂಧೀಯವರಿಗೆ ಸುರ್ಜೀತರ ಪತ್ರ

# ಪರಿಸ್ಥಿತಿ ಹದಗೆಡುವುದಕ್ಕೆ ಸರಕಾರವೂ ತನ್ನ ಕಾಣಿಕೆ ಸಲ್ಲಿಸಿದೆ

[ಶಿರೋಮಣಿ ಅಕಾಲೀದಳ ಕಳೆದ ಆಗಸ್ಟ್ 4 ರಿಂದ 47 ಅಂಶಗಳ ಕಾರ್ಯಕ್ರಮ ಮುಂದಿಟ್ಟು ಚಳುವಳಿಯೊಂದನ್ನು ಪ್ರಾರಂಭಿಸಿದೆ. ಅಕಾಲೀದಳದ ಇನ್ನೊಂದು ಗುಂಪು–ತಳವಂಡಿ ಗುಂಪು — ಕಳೆದ ಏಪ್ರಿಲ್‌ನಿಂದಲೇ ಕೆಲವು ಬೇಡಿಕೆ ಮುಂದಿಟ್ಟು ಚಳುವಳಿ ಆರಂಭಿಸಿದೆ. ಅಕಾಲೀದಳ ಪಂಜಾಬ್ ರಾಜ್ಯದ ಪ್ರಮುಖ ರಾಜಕೀಯ ಪಕ್ಷ. ಸಿಖ್ ಧಾರ್ಮಿಕ ಅಲ್ಪ ಸಂಖ್ಯಾತರ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಪಕ್ಷ. ಈ ದೃಷ್ಟಿಯಲ್ಲಿ ಅವರದ್ದು ಕೆಲವು ನ್ಯಾಯಪೂರ್ಣ ಬೇಡಿಕೆಗಳಿವೆ. ಈ ಬೇಡಿಕೆಗಳಿಗೆ ರಾಜ್ಯದ ಎಡಪಕ್ಷಗಳು ಹಾಗೂ ಇತರ ಪ್ರಜಾಪ್ರಭುತ್ವವಾದೀ ವಿಭಾಗಗಳು ಬೆಂಬಲಕೊಡುತ್ತಾ ಬಂದಿವೆ. ಈ ಬೇಡಿಕೆಗಳು ಈಡೇರಬೇಕಾದರೆ ಸಂಯುಕ್ತ ಹೋರಾಟಗಳು ಅಗತ್ಯ.

ಆದರೆ ಅಕಾಲೀದಳ ಈ ರೀತಿಯ ನಿಲುವು ತಳೆಯುವ ಬದಲು ಕೋಮುವಾದಿ ತೀವ್ರವಾದಿಗಳೊಂದಿಗೆ ಸೇರಿಕೊಂಡಿದೆ. ಇದರಿಂದಾಗಿ ಕೋಮುವಾದಿ ಬೇಡಿಕೆಗಳು ಪ್ರಾಮುಖ್ಯತೆ ಪಡೆಯುವಂತಾಗಿದೆ. ಆರ್. ಎಸ್. ಎಸ್. ಮುಂತಾದ ಹಿಂದೂ ಕೋಮುವಾದಿಗಳಿಗೆ ಕೋಮು ದ್ವೇಷ ಹರಡಿಸಲು ಮತ್ತಷ್ಟು ಅವಕಾಶವಾಗಿದೆ.

ಸಿಖ್ ತೀವ್ರವಾದಿಗಳಿಂದಾಗಿ ಚಳುವಳಿ ಬೇರೆ ತಿರುವು ಪಡೆದಿದ್ದು, ಸಿ.ಪಿ.ಐ (ಎಂ) ಈ ಕುರಿತು ಮೊದಲೇ ಮುನ್ನೆಚ್ಚರಿಕೆ ನೀಡಿತ್ತು.

ಇತ್ತೀಚೆಗೆ ದೆಹಲಿಯಲ್ಲಿ ಅಕಾಲೀದಳದ ನೇತೃತ್ವದಲ್ಲಿ ಹಿಂಸಾತ್ಮಕ ಮತಪ್ರದರ್ಶನ ನಡೆದ ಸಮಯದಲ್ಲಿ ಗೋಲಿಬಾರ್ ನಡೆದು ಕೆಲವರು ಮೃತಪಟ್ಟಿದ್ದಾರೆ.

ಈ ಪ್ರಕ್ಷುಬ್ಧ ಪರಿಸ್ಥಿತಿ ಕುರಿತು ಸಿ.ಪಿ.ಐ. (ಎಂ) ಪೊಲಿಟ್‌ಬ್ಯೂರೋ ಸದಸ್ಯ ಕಾಂ| ಹರಿಕಿಷನ್ ಸಿಂಗ್ ಸುರ್ಜೀತರು ಪ್ರಧಾನಿ ಇಂದಿರಾಗೆ ಅಕ್ಟೋಬರ್ 9 ರಂದು ಪತ್ರವೊಂದನ್ನು ಬರೆದಿದ್ದು, ಪತ್ರದ ಸಾರಾಂಶವನ್ನಿಲ್ಲಿ ಕೊಡಲಾಗಿದೆ].

ಪ್ರಿಯ ಶ್ರೀಮತಿ ಇಂದಿರಾ ಗಾಂಧಿಯವರೆ,

ಪಂಜಾಬಿನಲ್ಲಿನ ಸ್ಥಿತಿಯ ಬಗ್ಗೆ ಜಾಣ್ಮೆಯಿಂದ ವರ್ತಿಸಬೇಕೆಂದು ಒಂದು ವರ್ಷದಿಂದಲೂ ನಾನು ಹೇಳುತ್ತಾ ಬಂದಿದ್ದೇನೆ. ಆದರೆ ದುರದೃಷ್ಟವಶಾತ್ ಅಲ್ಲಿನ ಸ್ಥಿತಿ ತೀರಾ ಹದಗೆಡುತ್ತಿದೆ. ಸಿಖ್ ತೀವ್ರಗಾಮಿಗಳು ಮೂಲೆಗುಂಪಾಗುವುದರ ಬದಲು ತಮ್ಮ ಚಟುವಟಿಕೆ ಹೆಚ್ಚಿಸುತ್ತಿದ್ದಾರೆ. 1947 ಜುಲೈ-ಆಗಸ್ಟ್‌ನ ಹಿಂದಿನ ದಿನಗಳನ್ನು ನೆನಪಿಗೆ ತರುವಂತ ಘಟನೆಗಳು ನಡೆಯುತ್ತಿವೆ. ಹೊರನೋಟಕ್ಕೆ ಕೋಮುವಾದಿ ಘರ್ಷಣೆಯಂತೆ ಕಂಡು ಬರುವುದಿಲ್ಲವಾದರೂ, ಸೂಕ್ಷ್ಮವಾಗಿ ಪರಿಶೀಲಿಸಿದರೆ ಕೋಮುವಾದಿ ವಿಷಾಣು ಜನರ ಮನದಲ್ಲಿ ಬೇರೂರಿರುವುದನ್ನು ಕಾಣಬಹುದು.

ಪರಿಸ್ಥಿತಿ ಹದಗೆಡುವುದಕ್ಕೆ ಸರ್ಕಾರವೂ ತನ್ನ ಕಾಣಿಕೆ ಸಲ್ಲಿಸಿದೆ. ಜನರನ್ನು ಬಂಧಿಸಿ ಲಾಕಪ್‌ಗಳಲ್ಲಿ ಕೊಂದು, ಘರ್ಷಣೆಯಲ್ಲಿ ಮೃತರಾದರೆಂದು ಹೇಳುವುದು, ಮುಖ್ಯ ಮಂತ್ರಿಯ ಹತ್ಯೆಯ ಯತ್ನದಲ್ಲಿ ಆರೋಪಿಗಳನ್ನು ಪತ್ತೆ

(8ನೇ ಪುಟ ನೋಡಿ)

# ಸಂಕ್ಷಿಪ್ತ ಸಮಾಚಾರಗಳು

## ಗಂಗಾವತಿ :

ತೀವ್ರ ಸಮಸ್ಯೆಗಳನ್ನೆದುರಿಸುತ್ತಿರುವ ಇಲ್ಲಿನ ಸೈಕಲ್ ರಿಕ್ಷಾ ಚಾಲಕರು ಇದೀಗ ಸಂಘಟಿತರಾಗಿದ್ದಾರೆ. 14-9-82 ರಂದು ಎಲ್ಲ ಚಾಲಕರ ಸಭೆಯೊಂದು ನಡೆದು ಸಮಿತಿಯೊಂದು ರೂಪುಗೊಂಡಿದೆ. ಕಾಂ| ಡಿ. ದಾಸ್ ಪ್ರಧಾನ ಕಾರ್ಯದರ್ಶಿ, ಸಹಕಾರ್ಯದರ್ಶಿಗಳಾಗಿ ಈರಣ್ಣ ಉರುಕುಂದಿ ಹಾಗೂ ಅಕ್ಬರ್ ಮತ್ತು 17 ಜನ ಸಮಿತಿ ಸದಸ್ಯರು ಆಯ್ಕೆಗೊಂಡಿದ್ದಾರೆ. ಸಭೆಯನ್ನುದ್ದೇಶಿಸಿ ದ. ಸಂ. ಸ. ಯ ಕಾಂ| ಭಾಗ್ಯವಂತ ಹಾಗೂ ಡಿ. ವೈ. ಎಫ್. ಐ. ನ ಕಾಂ| ಗಂಗಾಧರ ಕುಷ್ಟಗಿಯವರು ಮಾತನಾಡಿ ಸಂಘಟನೆ ಅವಶ್ಯಕತೆ ಕುರಿತು ವಿವರಿಸಿದರು.

18-9-82 ರಂದು ಸೈಕಲ್ ರಿಕ್ಷಾ ಚಾಲಕರು ಮೆರವಣಿಗೆಯಲ್ಲಿ ತೆರಳಿ ತಹಸೀಲ್ದಾರರಿಗೆ ಹಾಗೂ ಮುನಸಿಪಾಲಿಟಿಯ ಮುಖ್ಯಾಧಿಕಾರಿಗೆ ಬೇಡಿಕೆಯ ಮನವಿ ಪತ್ರ ಸಲ್ಲಿಸಿದರು. ನಂತರ ಜ್ಯೂನಿಯರ್ ಕಾಲೇಜಿನ ಮೈದಾನದಲ್ಲಿ ಚಾಲಕರ ಸಭೆ ನಡೆಯಿತು.

## ಮಂಗಳೂರು :

ಇಲ್ಲಿನ 'ಕ್ಯಾಂಪ್ಕೋ ಲಿಮಿಟೆಡ್'ನಲ್ಲಿ ಇಂಟಕ್‌ನ ಕುತಂತ್ರದಿಂದಾಗಿ ಮಹಿಳಾ ಕೆಲಸಗಾರರಿಗೆ ಕೆಲಸವಿಲ್ಲದ ಪರಿಸ್ಥಿತಿಯುಂಟಾಗಿದೆ. ಈ ಕಾರ್ಖಾನೆಯಲ್ಲಿ 107 ಜನರು ಕೆಲಸ ಮಾಡುತ್ತಿದ್ದಾರೆ, ಸುಮಾರು 90ಕ್ಕೂ ಮಿಕ್ಕ ಮಹಿಳಾ ಕಾರ್ಮಿಕರೇ ಇರುವುದು. ಇವರೆಲ್ಲ ಸಿ.ಐ.ಟಿ.ಯು.ಗೆ ಸೇರಿದ 'ಕ್ಯಾಶುನೆಟ್ ಅಂಡ್ ಎರ್ಯಾಡ್ ವರ್ಕರ್ಸ್ ಯೂನಿಯನ್'ನ ಸದಸ್ಯರಾಗಿದ್ದಾರೆ.

ಮಾಲೀಕರ ಕುತಂತ್ರದಿಂದ ಸಂಘಟನೆಯನ್ನು ಛಿದ್ರಗೊಳಿಸಲು ಕೈ ಬೆರಳಿನಷ್ಟಿರುವ ಕೆಲವರು, ಯಾವ ನಿರ್ದಿಷ್ಟ ಬೇಡಿಕೆ ಇಲ್ಲದೆ, ಒಪ್ಪಂದ ಇರುವಾಗಲೇ 9-9-82 ರಿಂದ ಹಠಾತ್ ಮುಷ್ಕರ ಪ್ರಾರಂಭಿಸಿದ್ದಾರೆ. 25-9-82 ರಂದು 35 ಸ್ತ್ರೀ ಮಜೂರರಿಗೆ ಮಾಲೀಕರು ರಿಟ್ರೆಂಚ್ ನೋಟಿಸು ಜಾರಿ ಮಾಡಿದ್ದಾರೆ.

ಸೆಪ್ಟೆಂಬರ್ 21 ರಂದು ಯೂನಿಯನ್‌ನ ಆಶ್ರಯದಲ್ಲಿ 'ಕ್ಯಾಂಪ್ಕೋ ಲಿಮಿಟೆಡ್'ನ ಅಡಿಕೆ ಪರಿಷ್ಕರಣ ವಿಭಾಗದ ಸರ್ವಸದಸ್ಯರ ಸಭೆ ನಡೆದು ಇಂಟಕ್‌ನ ಇಬ್ಬದಿಯ ನೀತಿಯನ್ನು ಖಂಡಿಸಲಾಯಿತು. ಕೂಡಲೇ ವಿಷಯ ಇತ್ಯರ್ಥವಾಗದಿದ್ದಲ್ಲಿ ಅನಿರ್ದಿಷ್ಟ ಸತ್ಯಾಗ್ರಹ ಹೂಡುವ ಎಚ್ಚರಿಕೆ ನೀಡಲಾಗಿದೆ.

## ರಾಣೆಬೆನ್ನೂರು :

17-9-82 ರಂದು ರಾಣೆಬೆನ್ನೂರಿನ ಬೀಡಿ ಸೇದ್ದಿ ಕಾರ್ಮಿಕರ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸಂಘದ ಉಪಾಧ್ಯಕ್ಷ ಫಕೀರಪ್ಪ ವಿಭೂತಿ ವಹಿಸಿದ್ದರು.

ಕಾರ್ಮಿಕರನ್ನುದ್ದೇಶಿಸಿ ಕಾಂ| ಜಯಣ್ಣ, ವೈ. ಬಿ. ರೋಖಡೆ, ನಾರಾಯಣಪ್ಪ ಅವರುಗಳು ಮಾತನಾಡಿ ಸಂಘಟನೆ ಬಲಪಡಿಸುವಂತೆ ತಿಳಿಸಿದರು.

ಸಂಘದ ಕಾರ್ಯದರ್ಶಿ ಕಾಂ| ಎಸ್. ಎಫ್. ಕ್ಯಾದಗಿಯವರು ಮಾತನಾಡಿ ಸಂಘವನ್ನು ದುರ್ಬಲಗೊಳಿಸಲು ಮಾಲೀಕರು ನಡೆಸುತ್ತಿರುವ ಕುತಂತ್ರಗಳನ್ನು ತೀವ್ರವಾಗಿ ಖಂಡಿಸಿದರು.

## ಓಮಂಜೂರು :

19-9-82 ರಂದು ಓಮಂಜೂರು (ದ.ಕ.) ಪ್ರದೇಶದ ಬೀಡಿ ಕಾರ್ಮಿಕರ ಸಭೆಯು ಕಾಂ| ಬಿ. ಮುಂಡಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ಸಂದರ್ಭದಲ್ಲಿ, ಓಮಂಜೂರು ಪ್ರದೇಶ ಬೀಡಿ ಕೆಲಸಗಾರರ ಸಂಘವನ್ನು ದ.ಕ. ಜಿಲ್ಲಾ ಬೀಡಿ ಫೆಡರೇಶನಿನ ಕಾರ್ಯದರ್ಶಿ ಕಾಂ| ಯು. ಬಿ. ಲೋಕಯ್ಯನವರು ಉದ್ಘಾಟಿಸಿದರು. ಸಭೆಯನ್ನುದ್ದೇಶಿಸಿ ಕಾಂ| ಎಚ್. ಗೋಪಾಲ್, ಜೆ. ಬಾಲಕೃಷ್ಣಶೆಟ್ಟಿ, ಎಂ. ಹೊನ್ನಯ್ಯ ಇವರುಗಳು ಬೀಡಿ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಮಾತನಾಡಿದರು.

ನೂತನ ಸಂಘದ ಚುನಾಯಿತ ಅಧ್ಯಕ್ಷರಾಗಿ ಬಿ. ಮುಂಡಪ್ಪ ಉಪಾಧ್ಯಕ್ಷರಾಗಿ ಚೆನ್ನಪ್ಪ ಉಲಾಯಿಬೆಟ್ಟು, ಕಾರ್ಯದರ್ಶಿಯಾಗಿ ಕೆ. ಗಂಗಯ್ಯ, ಜೊತೆ ಕಾರ್ಯದರ್ಶಿಯಾಗಿ ಡಿ. ಬಾಬು ಮತ್ತು ಬಿ. ಗೋಪಾಲ ಮೂಲ್ಯ, ಕೋಶಾಧಿಕಾರಿಯಾಗಿ ಬಿ. ಗೋಪಾಲ್ ಕರ್ಕೇರ ಹಾಗೂ 19 ಜನ ಕಾರ್ಯಕಾರಿ ಸಮಿತಿ ಸದಸ್ಯರು ಚುನಾಯಿತರಾಗಿದ್ದಾರೆ.

## ಹರಿಹರ :

29-9-82 ರಂದು ಹರಿಹರದಲ್ಲಿ ಸಿ.ಪಿ.ಐ.(ಎಂ) ಪ್ರಾದೇಶಿಕ ಸಮಿತಿಯ ಸಭೆ ಸೇರಿತ್ತು. ಸಭೆಯಲ್ಲಿ ರಾಜ್ಯ ಸಮಿತಿಯ ಕಾರ್ಯದರ್ಶಿ ಕಾಂ| ಎಂ. ಕೆ. ಭಟ್, ಸದಸ್ಯರುಗಳಾದ ಕಾಂ| ವಿ ಜೆ.ಕೆ. ನಾಯರ್ ಮತ್ತು ಕಾಂ| ಮಹಮ್ಮದ್ ದಸ್ತಗೀರ್ ಪಾಲ್ಗೊಂಡಿದ್ದರು.

ಹರಿಹರದ ಫಾಲಿಫೈಬರ್ಸ್ ಆಡಳಿತ ವರ್ಗವು ಕಾರ್ಮಿಕರಿಗೆ ನ್ಯಾಯವಾಗಿ ಸಿಗಬೇಕಾದ ಸೌಲಭ್ಯಗಳನ್ನು ಕೊಡದೇ, ಸೂಕ್ತ ಒಪ್ಪಂದಕ್ಕೆ ಬಾರದೇ ವಿಳಂಬ ನೀತಿಯನ್ನು ಅನುಸರಿಸುತ್ತಿರುವುದನ್ನು ಸಭೆ ತೀವ್ರವಾಗಿ ಖಂಡಿಸಿದೆ ಹಾಗೂ ಪಾಲಿಫೈಬರ್ಸ್‌ನ ಕಾರ್ಮಿಕರಿಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿತು.

## ಪುತ್ತೂರು:

3-10-82 ರಂದು ಪುತ್ತೂರು ತಾಲ್ಲೂಕು ಬೀಡಿ ಮತ್ತು ಇತರ ಕಾರ್ಮಿಕರ ಸಂಘದ ಸಂಘಟನಾ ಸಭೆಯು ಪುತ್ತೂರಿನ ಸಹಕಾರಿ ಬ್ಯಾಂಕಿನ ಸಭಾಂಗಣದಲ್ಲಿ ಜರುಗಿತು. ಸಭೆಯ ಅಧ್ಯಕ್ಷತೆಯನ್ನು ಕಾಂ| ಯು. ಸೀತಾರಾಮ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ದ. ಕ. ಜಿಲ್ಲಾ ಬೀಡಿ ಫೆಡರೇಷನ್ನಿನ ಪ್ರಧಾನ ಕಾರ್ಯದರ್ಶಿ ಕಾಂ| ಯು. ಬಿ. ಲೋಕಯ್ಯನವರು ಆಗಮಿಸಿದ್ದರು.

ಆರಂಭದಲ್ಲಿ ರೈತ-ಕಾರ್ಮಿಕ ಮುಖಂಡ ಕಾಂ| ಬಿ. ರಾಮಕೃಷ್ಣ ಅವರು ಸ್ವಾಗತಿಸಿದರು. ಕಾಂ| ಲೋಕಯ್ಯ ಸಭೆಯನ್ನುದ್ದೇಶಿಸಿ ಮಾತನಾಡಿ, ಕಂಟ್ರಾಕ್ಟ್ ಪದ್ಧತಿ ಸಂಪೂರ್ಣ ರದ್ದಾಗುವಂತೆ ಮಾಡಲು ತೀವ್ರ ಹೋರಾಟ ನಡೆಸಲು ವಿನಂತಿಸಿದರು. ಜೂನ್ ತಿಂಗಳಿನಲ್ಲಿ ನಡೆದ ಹೋರಾಟದ ಫಲವಾಗಿ 1-8-1978 ರಿಂದ ಪ್ರಾವಿಡೆಂಟ್ ಫಂಡಿನ ಲೆಕ್ಕವನ್ನು ಜ್ಯಾರಿಗೊಳಿಸುವಲ್ಲಿ ಯಶಸ್ವಿಯಾಗಿದ್ದನ್ನು ವಿವರಿಸಿದ ಅವರು ಐಕ್ಯ ಹೋರಾಟಕ್ಕೆ ಮನವಿ ಮಾಡಿದರು.

ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಕಾಂ| ಯು. ಸೀತಾರಾಮ ಅವರು ಸಂಘಟಿತ ಹೋರಾಟದಿಂದ ಮಾತ್ರ ಹಕ್ಕನ್ನು ರಕ್ಷಿಸಿಕೊಳ್ಳಲು ಸಾಧ್ಯ ಎಂದರು.

## ಬೆಂಗಳೂರು :

1—10—82 ರಂದು ಭಾರತ್ ಇಲೆಕ್ಟ್ರಾನಿಕ್ಸ್ ವರ್ಕರ್ಸ್ ಯೂನಿಯನ್‌ನ ಸರ್ವಸದಸ್ಯರ ಸಭೆ ನಡೆಯಿತು. ಯೂನಿಯನ್‌ನ ಜಂಟಿ

(7ನೇ ಪುಟ ನೋಡಿ)

---

ಸಿಲಿಗುರಿಯಲ್ಲಿ

# ಅಖಿಲ ಭಾರತ ಪ್ಲಾಂಟೇಷನ್ ಕಾರ್ಮಿಕರ ಫೆಡರೇಷನ್ನಿನ ನಾಲ್ಕನೇ ಸಮ್ಮೇಳನ

ಅಖಿಲ ಭಾರತ ಪ್ಲಾಂಟೇಷನ್ ಕಾರ್ಮಿಕರ ಫೆಡರೇಷನ್ನಿನ ನಾಲ್ಕನೇ ಸಮ್ಮೇಳನವು ಪ. ಬಂಗಾಲದ ದಾರ್ಜಿಲಿಂಗ್ ಜಿಲ್ಲೆಯ ಸಿಲಿಗುರಿಯಲ್ಲಿ ಸೆಪ್ಟೆಂಬರ್ 16 ರಿಂದ 18ರ ವರೆಗೆ ನಡೆಯಿತು. ಸಮ್ಮೇಳನದ ಅಂಗವಾಗಿ ಸೆಪ್ಟೆಂಬರ್ 18 ರಂದು ಸಿಲಿಗುರಿಯಲ್ಲಿ ಭಾರೀ ವರ್ಣರಂಜಿತ ಮೆರವಣಿಗೆ ನಡೆಯಿತು.

ಸೆ. 16 ರಂದು ಆರಂಭವಾದ ಸಮ್ಮೇಳನವನ್ನು ಸಿ. ಐ. ಟಿ. ಯು. ಅಧ್ಯಕ್ಷ ಕಾಂ| ಬಿ. ಟಿ. ರಣದಿವೆ ಉದ್ಘಾಟಿಸಿದರು. ಆರಂಭದಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷ ಕಾಂ| ಪರಿಮಳ ಮಿತ್ರ (ಪ.ಬಂಗಾಲದ ಸಾರಿಗೆ ಮತ್ತು ಅರಣ್ಯ ಸಚಿವ) ಪ್ರತಿನಿಧಿಗಳನ್ನು ಸ್ವಾಗತಿಸಿದರು. ರಾಷ್ಟ್ರದ ಎಲ್ಲೆಡೆಗಳಿಂದ 1,22000 ತೋಟ ಕಾರ್ಮಿಕರನ್ನು ಪ್ರತಿನಿಧಿಸುವ 310 ಪ್ರತಿನಿಧಿಗಳೂ ಹಾಗೂ ಕೆಲವು ವೀಕ್ಷಕರೂ ಸಮ್ಮೇಳನಕ್ಕೆ ಆಗಮಿಸಿದ್ದರು.

ಪ್ಯಾಲೇಸ್ತೈನಿಯ ರೈತ ಸಂಘದ ಮುಖಂಡ, ಪಿ. ಎಲ್. ಓ ಪ್ರತಿನಿಧಿ ಕಾಂ| ತಾಫಿರ್ ಸಾಲೆ ಅವರು ಸಮ್ಮೇಳನಕ್ಕೆ ಶುಭ ಕೋರಿದರು. ಪಿ. ಎಲ್. ಓ.ನ ಧೀರೋದಾತ್ತ ಹೋರಾಟದಲ್ಲಿ ಬೆಂಬಲವನ್ನಿತ್ತ ಭಾರತದ ಜನತೆಯನ್ನು ಅವರು ಅಭಿನಂದಿಸಿದರು. ಅವರು ಮಾತನಾಡಲೆದ್ದಾಗ ಪ್ರತಿನಿಧಿಗಳು ಹರ್ಷೋದ್ಗಾರಗಳಿಂದ ಅವರನ್ನು ಸ್ವಾಗತಿಸಿದರು.

ಸೌಹಾರ್ದ ಪ್ರತಿನಿಧಿಗಳಾಗಿ ಆಗಮಿಸಿದ್ದ ಬಾಂಗ್ಲಾ ದೇಶದ ಕೃಷಿ ಕಾರ್ಮಿಕರ ಮುಖಂಡ ಕಾಂ| ನೂರುಲ್ ಅನ್ವರ್ ಹಾಗೂ ಶ್ರೀಲಂಕಾದ ತೋಟ ಕಾರ್ಮಿಕರ ಮುಖಂಡ ಕಾಂ| ಚಂದ್ರಮೋಹನ್ ಸಮ್ಮೇಳನಕ್ಕೆ ಶುಭ ಕೋರಿದರು. ಕಾಂ| ಚಂದ್ರಮೋಹನ್ ಮಾತನಾಡುತ್ತಾ, ಶ್ರೀಲಂಕಾದ ಕಾರ್ಮಿಕರು ಎಲ್ಲಾ ಚಹಾ ತೋಟಗಳನ್ನು ರಾಷ್ಟ್ರೀಕರಣ ಮಾಡುವಂತೆ ಒತ್ತಾಯಿಸಿ ಧೀರ ಹೋರಾಟ ನಡೆಸಿ ಯಶಸ್ವಿಯಾದುದನ್ನು ವಿವರಿಸಿದರು. ಅವರು ಮುಂದುವರೆದು, ಶ್ರೀಲಂಕಾದ ಬಹುತೇಕ ತೋಟ ಕಾರ್ಮಿಕರು ಭಾರತೀಯ ಸಂಜಾತರಾಗಿದ್ದು, 'ಇಂದಿರಾ-ಸಿರಿಮಾವೋ ಒಪ್ಪಂದ'ದನ್ವಯ ಸಹಸ್ರಾರು ಕಾರ್ಮಿಕರು ಭಾರತಕ್ಕೆ ವಲಸೆ ಬಂದಿದ್ದು, ಆ ಕಾರ್ಮಿಕರಿಗೆ ಅವರದೇ ಆದ ಸಮಸ್ಯೆಗಳಿದ್ದು, ಈ ವಿಷಯದಲ್ಲಿ ಪ್ಲಾಂಟೇಷನ್ ಕಾರ್ಮಿಕರ ಫೆಡರೇಷನ್ ಗಮನ ಹರಿಸಬೇಕು ಎಂದು ವಿನಂತಿಸಿದರು.

ಸೋವಿಯತ್ ಒಕ್ಕೂಟ, ವಿಯೆಟ್ನಾಂ, ಕ್ಯೂಬಾ, ರುಮಾನಿಯಾ, ಸೈಪ್ರಸ್, ಉತ್ತರ ಕೊರಿಯಾ, ಇಟಲಿ ಮೊದಲಾದ ದೇಶಗಳ ಕೃಷಿ ಕಾರ್ಮಿಕರ, ತೋಟ ಕಾರ್ಮಿಕರ ಸಂಘಟನೆಗಳಿಂದ ಮತ್ತು ಟ್ರೇಡ್ ಯೂನಿಯನ್ ಇಂಟರ್ ನ್ಯಾಷನಲ್ ಆಫ್ ಅಗ್ರಿಕಲ್ಚರ್, ಫಾರೆಸ್ಟ್ರಿ ಆ್ಯಂಡ್ ಪ್ಲಾಂಟೇಷನ್ ವರ್ಕರ್ಸ್ ಸಂಘಟನೆಯಿಂದ, ಇಂಟರ್ ನ್ಯಾಶನಲ್ ಲೇಬರ್ ಆರ್ಗನೈಜೇಶನ್ ನಿಂದ ಶುಭ ಸಂದೇಶಗಳು ಬಂದಿದ್ದವು. ಕಾಂ| ವಿಮಲಾ ರಣದಿವೆ ಈ ಸಂದೇಶಗಳನ್ನು ಓದಿದರು.

ಕಾಂ| ರಮಾಶಂಕರ್ ಪ್ರಸಾದ ಸಂಚಾಲಕರಾಗಿ ಮತ್ತು ವಿ. ಸುಕುಮಾರ್ (ಕರ್ನಾಟಕ), ಚಂದ್ರಶೇಖರ್ ಪಿಳ್ಳೈ ಇವರು ಸದಸ್ಯರಾಗುಳ್ಳ ಕ್ರೆಡೆನ್ಶಿಯೇಲ್ ಕಮಿಟಿಯನ್ನು ರಚಿಸಲಾಯಿತು. ನಂತರ ಫೆಡರೇಷನ್ನಿನ ಪ್ರಧಾನ ಕಾರ್ಯದರ್ಶಿ ಕಾಂ| ಆನಂದ್ ಪಾಠಕ್ (ಎಂ ಪಿ.) ಅವರು ವರದಿಯನ್ನೊಪ್ಪಿಸಿದರು.

ಮರುದಿನ (ಸೆ. 17) ವರದಿಯ ಮೇಲೆ ನಡೆದ ಸುದೀರ್ಘ ಚರ್ಚೆಯಲ್ಲಿ ಕರ್ನಾಟಕದ ಪ್ರತಿನಿಧಿಗಳಾದ ಕಾಂ| ವಿ. ಸುಕುಮಾರ್ ಮತ್ತು ಕಾಂ| ಲತೀಫ್ ಭಾಗವಹಿಸಿದ್ದರು. ಲೆಕ್ಕಪತ್ರವನ್ನು ಫೆಡರೇಷನ್ನಿನ ಖಜಾಂಚಿ ಕಾಂ| ಸಿ. ನಂಜುಂಡಪ್ಪ ಸಲ್ಲಿಸಿದರು.

ಸೆ. 18 ರಂದು ಕಾಂ| ಆನಂದ್ ಪಾಠಕ್ ಅವರು ಚರ್ಚೆಗೆ ಉತ್ತರ ನೀಡಿದರು. ನಂತರ ಈ ಕೆಳಕಂಡವರುಳ್ಳ ನೂತನ ಪದಾಧಿಕಾರಿಗಳನ್ನು ಚುನಾಯಿಸಲಾಯಿತು :

ಅಧ್ಯಕ್ಷರಾಗಿ ಕಾಂ| ಪರಿಮಳ ಮಿತ್ರ, ಪ್ರಧಾನ ಕಾರ್ಯದರ್ಶಿಯಾಗಿ ಕೇರಳದ ಕಾಂ| ಕೆ. ಪದ್ಮನಾಭನ್ ಅವರನ್ನು, ಉಪಾಧ್ಯಕ್ಷರುಗಳಾಗಿ ತ್ರಿಪುರಾದ ರೆವಿನ್ಯೂ ಮಂತ್ರಿ ಕಾಂ| ಬಿರೇನ್ ದತ್ತಾ, ಆನಂದ್ ಪಾಠಕ್, ಸುಭೋದ್ ಸೇನ್, ಸಿ. ಕುಞ್ಞಿಕಣ್ಣನ್ ಇವರುಗಳನ್ನು, ಕಾರ್ಯದರ್ಶಿಗಳಾಗಿ ಕಾಂ| ವಿಮಲಾ ರಣದಿವೆ, ಅಮರ್ ಘೋಷ್ ದಸ್ತೀದಾರ್ ಮತ್ತು ಕಾಂ| ಹೇಮಚಂದ್ರನ್, ಖಜಾಂಚಿಯಾಗಿ ಸಿ. ನಂಜುಂಡಪ್ಪ ಇವರುಗಳನ್ನು ಸರ್ವಾನುಮತದಿಂದ ಚುನಾಯಿಸಲಾಯಿತು. ಚುನಾಯಿತ ಕಾರ್ಯಕಾರಿ ಸಮಿತಿಯಲ್ಲಿ ಕರ್ನಾಟಕದ ಕಾಂ| ವಿ. ಸುಕುಮಾರ್ ಅವರೂ ಇದ್ದಾರೆ.

ಕೊನೆಯಲ್ಲಿ ಕಾಂ| ಬಿ. ಟಿ ರಣದಿವೆ ಸಮಾರೋಪ ಭಾಷಣ ಮಾಡಿದರು.

ಸೆ. 18 ರಂದು ಸಮ್ಮೇಳನದ ಅಂಗವಾಗಿ ನಡೆದ ಭಾರೀ ಮೆರವಣಿಗೆ ಆಕರ್ಷಣೀಯವಾಗಿತ್ತು. ಸುತ್ತಮುತ್ತಲ ಪ್ರದೇಶಗಳಿಂದ ಸಹಸ್ರಾರು ತೋಟ ಕಾರ್ಮಿಕರು ಮೆರವಣಿಗೆಗೆ ಆಗಮಿಸಿದ್ದರು. ಮೆರವಣಿಗೆಯಲ್ಲಿ ಇತರ ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರೂ ಪಾಲ್ಗೊಂಡಿದ್ದರು.

ನಂತರ ನಡೆದ ಬೃಹತ್ ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ಕಾಂ| ಸಮರ್ ಮುಖರ್ಜಿ ವಹಿಸಿದ್ದರು. ಸಭೆಯನ್ನುದ್ದೇಶಿಸಿ ಅನೇಕ ಮುಖಂಡರು ಮಾತನಾಡಿ, ದುಡಿಯುವ ಜನತೆಗೆ ಮಾರಕವಾಗಿರುವ ಕಾಯ್ದೆಗಳನ್ನು ಅನುಷ್ಠಾನಕ್ಕೆ ತರುತ್ತಿರುವ ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಕಟುವಾಗಿ ಖಂಡಿಸಿದರು. ಪ್ರಜಾಪ್ರಭುತ್ವ ಮೌಲ್ಯಗಳನ್ನು ತುಳಿಯಲೆತ್ನಿಸುತ್ತಿರುವ ಸರಕಾರದ ಕ್ರಮಗಳ ವಿರುದ್ಧ ಐಕ್ಯ ಹೋರಾಟ ನಡೆಸಲು ಸಿದ್ಧರಾಗಿರಲು ಮನವಿ ಮಾಡಿದರು.

### ಕರ್ನಾಟಕ ರಾಜ್ಯದಲ್ಲಿ

# ಕರ್ನಾಟಕ ವಿಶ್ವವಿದ್ಯಾನಿಲಯ ನೌಕರರ ಬಾಯಿಗೆ ಬೀಗ ಮುದ್ರೆ

—ಎನ್ಕೆ

1975ರಲ್ಲಿ ತುರ್ತು ಪರಿಸ್ಥಿತಿಯನ್ನು ಹೇರಿ, ಇಂದಿರಾ ಗಾಂಧಿ 65 ಕೋಟಿ ಭಾರತೀಯರ ಕೈಕಾಲುಕಟ್ಟಿ, ಬಾಯಿಗೆ ಬೀಗ ಮುದ್ರೆ ಹಾಕಿ ಕರಾಳ ಆಡಳಿತೆ ನಡೆಸಿದ್ದರು. 1977 ಮಹಾ ಚುನಾವಣೆಯಲ್ಲಿ ದೇಶದ ಜನತೆ ಕರಾಳ ರಾಣಿಯ ಕರಾಳ ಆಡಳಿತೆಯನ್ನು ಕೊನೆಗೊಳಿಸಿದ್ದರು. 1980ರಲ್ಲಿ ಈ ಮಹಾಕಾಳಿ ಮತ್ತೆ ಅಧಿಕಾರಕ್ಕೆ ಬಂದಂದಿನಿಂದ, ನಾಗರೀಕ ಹಕ್ಕುಗಳನ್ನು, ಪತ್ರಿಕಾ ಸ್ವಾತಂತ್ರ್ಯವನ್ನೂ, ಮೊಟಕುಗೊಳಿಸುವ ಪ್ರಯತ್ನ ನಡೆಸುತ್ತಲೇ ಇದ್ದಾಳೆ. ಇವುಗಳ ವಿರುದ್ಧ ಸಂಘಟಿತ ಹೋರಾಟಗಳೂ ನಡೆಯುತ್ತಲೇ ಇವೆ.

ಕರಾಳ ರಾಣಿಯ ಕುಟುಂಬಕ್ಕೆ ಸೇರಿದ ಅಧಿಕಾರಿಗಳಿನ್ನೂ ಗುಲಾಮಗಿರಿಯ ವಿಚಾರ ಸರಣಿಯಲ್ಲೇ ವರದಿಗಳನ್ನು ಸಲ್ಲಿಸುವ ಧಾರ್ಢ್ಯತೆ ತೋರಿಸುತ್ತಿರುವುದನ್ನು ನೋಡುವಾಗ ಬದಲಾಗುತ್ತಿರುವ ಸಮಾಜದ, ಜನತೆಯ ವಿಚಾರಧಾರೆಯ ಅರಿವು ಈ ಮಹಾಶಯರಿಗೆ ಆದಂತೆ ಕಂಡು ಬರುವುದಿಲ್ಲ.

ಕರ್ನಾಟಕ ವಿಶ್ವವಿದ್ಯಾನಿಲಯದ ಶಿಕ್ಷಕರು ಮತ್ತು ಸಿಬ್ಬಂಧಿಯವರನ್ನು ಬ್ರಿಟಿಷರ ಆಡಳಿತೆಗಿಂತಲೂ ಕೀಳ್ಮಟ್ಟಕ್ಕಿಳಿಸುವ ಹೊಸ ಸೇವಾ ಸಂಹಿತೆಯೊಂದನ್ನು ಹೇರುವ ಪ್ರಯತ್ನ ಸರಕಾರದಿಂದ ನಡೆಯುತ್ತಿದೆ. ನಮ್ಮ ರಾಜ್ಯದ ವಿಶ್ವವಿದ್ಯಾನಿಲಯಗಳ ಸಿಬ್ಬಂದಿಗೆ ಏಕರೂಪ ಸೇವಾ ನಿಯಮವನ್ನು ನಿವೃತ್ತ ಅಧಿಕಾರಿ ರೇವಡಿಯವರಿಂದ ಸಿದ್ಧಪಡಿಸಲಾಗಿದೆ. ದಕ್ಷಿಣ ಅಫ್ರಿಕದ ಸರಕಾರ ಕೂಡ ನಾಚುವಂತ ವಿಧಿಗಳು ರೇವಡಿಯವರು ತಯಾರಿಸಿದ ಸೇವಾನಿಯಮದಲ್ಲಿವೆ.

ನೌಕರರು-ಶಿಕ್ಷಕರು ತಮ್ಮ ಹಿತ ರಕ್ಷಿಸುವಂಥ ಸಂಘಟನೆ ರಚಿಸಬಾರದು, ಅದರ ಸದಸ್ಯರಾಗಬಾರದು, ಅದರ ಪರವಾಗಿ ಹೇಳಿಕೆ ನೀಡಬಾರದು, ಯಾವುದೇ ರೀತಿಯ ಮುಷ್ಕರ, ಮತ ಪ್ರದರ್ಶನಗಳಲ್ಲಿ ಪಾಲ್ಗೊಳ್ಳಬಾರದು, ಉಪಕುಲಪತಿಗಳ ಒಪ್ಪಿಗೆಯಿಲ್ಲದೆ ಯಾವದೇ ನಿಧಿ ಸಂಗ್ರಹ ಮಾಡಕೂಡದು, ಅಂತಹ ಕೆಲಸಗಳಿಗೆ ನೆರವಾಗಬಾರದು, ಯಾವುದೇ ಉಡುಗೊರೆ ಸ್ವೀಕರಿಸಬಾರದು, ಮದುವೆ ಮತ್ತಿನ್ನಿತರ ಧಾರ್ಮಿಕ ಕಾರ್ಯಗಳ ಆಚರಣೆಯ ಸಂದರ್ಭದಲ್ಲಿ ಸಂಬಂಧಿತ, ಮತ್ತಿನ್ನಿತರರಿಂದ ಬರಬಹುದಾದ ನಗದಿನ ಪ್ರಮಾಣವನ್ನೂ ಇತರ ಉಡುಗೊರೆಗಳ ವಿವರಗಳನ್ನೂ ಉಪಕುಲಪತಿಗೆ ತಿಳಿಸಬೇಕು, ಸಾರ್ವಜನಿಕ ಸನ್ಮಾನಗಳಲ್ಲಿ ಉಪಕುಲಪತಿಯ ಒಪ್ಪಿಗೆಯಿಲ್ಲದೆ ಉಡುಗೊರೆಗಳನ್ನು ಪಡೆಯಬಾರದು, ನೌಕರ ಅಥವಾ ಅವನ ಕುಟುಂಬದ ಯಾವುದೇ ವ್ಯಕ್ತಿ ಖಾಸಗಿ ವ್ಯಾಪಾರದಲ್ಲಿ ತೊಡಗಿದ್ದರೆ ಅದನ್ನು ಉಪಕುಲಪತಿಗಳ ಗಮನಕ್ಕೆ ತರಬೇಕು ಮೊದಲಾದ ಕಟ್ಟುನಿಟ್ಟಿನ, ಕೈಬಾಯಿಗಳನ್ನು ಸಂಪೂರ್ಣ ಮುಚ್ಚಿಡುವ, ಯಾವುದೇ ರೀತಿಯ ವ್ಯಕ್ತಿ ಸ್ವಾತಂತ್ರ್ಯವೇ ಇಲ್ಲದಂತೆ ಮಾಡುವ, ಖಾಸಗೀ ಜೀವನವನ್ನು ನಿರ್ಭಯದಿಂದ ನಡೆಸಿಕೊಂಡು ಹೋಗುವ ಸ್ವಾತಂತ್ರ್ಯವನ್ನು ವಿಶ್ವವಿದ್ಯಾಲಯ ನೌಕರರಿಂದ—ಶಿಕ್ಷಕರಿಂದ ಕಸಿದುಕೊಳ್ಳಲಾಗಿದೆ. ಕರ್ನಾಟಕ ವಿಶ್ವವಿದ್ಯಾಲಯದ ಸೆನೆಟ್ ರೇವಡಿಯವರ ಕರಡು ನಿಯಮಗಳನ್ನು ಕಟುವಾಗಿ ಟೀಕಿಸಿ ಅದನ್ನು ಸ್ವೀಕರಿಸಲು ನಿರಾಕರಿಸಿದೆ. ಇತರ ವಿಶ್ವವಿದ್ಯಾನಿಲಯಗಳ ಸೆನೇಟ್ ಸದಸ್ಯರ ಧೈರ್ಯವನ್ನು ಅಳೆದು ನೋಡಬೇಕಾಗಿದೆ. ರೇವಡಿಯವರ ಸೇವಾ ನಿಯಮದ ಸ್ಥಾನ ನಾರುವ ಗಟಾರವಲ್ಲದೆ ಪವಿತ್ರ ವಿಶ್ವವಿದ್ಯಾನಿಲಯವಲ್ಲ. ವಿದ್ಯಾರ್ಥಿಗಳೂ, ಶಿಕ್ಷಕರೂ, ನೌಕರರೂ ಈ ನಿಯಮಗಳ ವಿರುದ್ಧ ಐಕ್ಯ ಹೋರಾಟ ನಡೆಸಲಿ: ನಾವು ಬೆಂಬಲಿಸುತ್ತೇವೆ.

## ಆನ್—ಆಫ್ ಚದುರಂಗದಾಟ

ರಾತ್ರಿ ಓದುತ್ತಿದ್ದಂತೆಯೇ ಒಂದು ಪುಟ ಮುಗಿಯುವುದರೊಳಗಾಗಿಯೇ ವಿದ್ಯುತ್ ದೀಪ ಆರಿ ಹೋಗುತ್ತದೆ. ವಿದ್ಯುತ್ ಸ್ಟವ್‌ನಲ್ಲಿ ಚಹಾಮಾಡಿ ಕುಡಿಯಬೇಕಾದರೆ ಕನಿಷ್ಠ ಅರ್ಧ ಗಂಟೆಯಾದರೂ ಬೇಕಾಗುತ್ತದೆ. ಲೇಖಕರಿಗೂ, ವಿದ್ಯಾರ್ಥಿಗಳಿಗೂ, ಮಹಿಳೆಯರಿಗೂ ಹಾಗೆಯೇ ದಾರಿ ಹೋಕರಿಗೂ ವಿದ್ಯುತ್ ದೀಪದ ಬವಣೆ. ಕಾರ್ಖಾನೆಗಳಲ್ಲಿ ತಟಕ್ಕನೆ ಮೆಶಿನ್ ನಿಂತುಬಿಡುತ್ತದೆ. ಗಂಟೆಗಟ್ಲೆ ಮೆಶಿನ್‌ಗಳು ನಡೆಯುವುದೇ ಇಲ್ಲ. ಇತ್ತೀಚೆಗೆ ಹಲವಾರು ಗುಡಿಗುಂಡಾರಗಳ ಪೂಜಾರಿಗಳೂ ಬೇಸತ್ತು "ಏನು ಉಪಾಧ್ಯಾಯರೇ, ಈ ಕೆ.ಇ.ಬಿ. ಅಧಿಕಾರಿಗಳು ದೇವರ ಮೇಲೂ ಕರುಣೆ ತೋರಿಸುವುದಿಲ್ಲವಲ್ಲ. ಮಹಾ ಪೂಜೆ ಮಾಡುವಾಗಲೇ ದೀಪ ಆರಿ ಹೋಗುತ್ತದಲ್ಲ ಏನು ಹಾಳಾಗ" ಎಂದು ಉದ್ಗಾರ ತೆಗೆಯುತ್ತಿದ್ದರು. ಜಗತ್ತಿನ ಸೃಷ್ಟಿಕರ್ತನಾದ ಆ ದೇವರಿಗೂ, ಮಾನವ ಸೃಷ್ಟಿಸಿದ ದೀಪದ ಅವಶ್ಯಕತೆ ಬೇಕಾಗಿರುವುದನ್ನು ನೋಡುವಾಗ ಪ್ರಸಾದಕ್ಕಾಗಿ ಬಂದ ಕೆ.ಇ.ಬಿ. ನೌಕರನೊಬ್ಬ "ಜಗತ್ತಿನ ಸೃಷ್ಟಿಕರ್ತನಿಗಿಂತಲೂ ನಾನೇ-ವಿದ್ಯುತ್ ದೀಪ ಒದಗಿಸುವವನೇ—ದೊಡ್ಡವನಾದೆನಲ್ಲ" ಎಂದು ಎದೆಯುಬ್ಬಿಸಿ ನನ್ನ ಕಡೆ ನೋಡಿದ.

ಈ ವರ್ಷ ಅತಿ ಮಳೆಯಿಂದಾಗಿ, ಶರಾವತಿ, ಕಾಳಿ, ಕಾವೇರಿ ತುಂಗಭದ್ರಾ ಅಣೆಕಟ್ಟುಗಳಿಂದ ಹೆಚ್ಚಿನ ನೀರನ್ನು ಬಿಡುಗಡೆ ಮಾಡಲಾಯಿತೆಂಬ ಸುದ್ದಿ ಕೇಳುತ್ತಿದ್ದಂತೆಯೇ, ಹೈಟೆನ್‌ಶನ್ ವಿದ್ಯುಚ್ಛಕ್ತಿ ಪೂರೈಸುವವರಿಗೆಲ್ಲ ಶೇ. 33 ರಷ್ಟು ವಿದ್ಯುತ್ ಕಡಿತ ಮಾಡಲಾಗಿದೆಂಬ ದಪ್ಪಕ್ಷರದ ಹೇಳಿಕೆಯೂ ಬಂತು. ಮತ್ತೊಂದು ಕಡೆ—ಹೊಸ ಕಾರ್ಖಾನೆಗಳ ಸ್ಥಾಪನೆಗೆ ರಾಜ್ಯ ಸರಕಾರದ ಆಹ್ವಾನವೂ—ಬಂತು.

ಈ ವರ್ಷ ವಿದ್ಯುತ್ ಉತ್ಪಾದನಾ ಕೇಂದ್ರಗಳಲ್ಲಿ ನೀರಿನ ಅಭಾವವಿಲ್ಲದಿದ್ದಾಗ, ಇನ್ನೂ ಮಳೆಗಾಲ ಇರುವಾಗಲೇ ವಿದ್ಯುತ್ ಕಡಿತವೇಕೆ? ಕಾರ್ಖಾನೆಗಳಿಗೂ — ನಾಗರೀಕರಿಗೂ ವಿದ್ಯುತ್ ಕಡಿತ. ಉಳಿತಾಯವೆಂದು ಹೇಳಿ ನಾಗರೀಕರಿಗೆ ಪ್ರತಿ ದಿವಸ ಕನಿಷ್ಠ 8-10 ಸಲ ವಿದ್ಯುತ್ ಕಡಿತ ಮಾಡಲಾಗುತ್ತಿದೆ. ಮಳೆಗಾಲ ಪ್ರಾರಂಭವಾದ ನಾಲ್ಕನೇ ತಿಂಗಳಲ್ಲೇ ಈ ಗತಿಯಾದರೆ ಮುಂದಿನ 8 ತಿಂಗಳ ಪರಿಸ್ಥಿತಿ ಏನಾಗಬಹುದು ಎಂಬ ಚಿಂತೆಯಲ್ಲಿದ್ದಾರೆ ನಾಗರೀಕರೂ—ಉದ್ಯಮಿಗಳು.

ಈ ವರ್ಷವನ್ನು "ಉತ್ಪಾದನಾ ವರ್ಷ"ವೆಂದು ಸಾರಿದ್ದಾರೆ ಇಂದಿರಾ ಗಾಂಧಿಯವರು. ಹೆಚ್ಚು ಕಾರ್ಖಾನೆಗಳು ತಲೆ ಎತ್ತಲೆಂದು ಗುಂಡೂರಾಯರು ಹೇಳುತ್ತಿದ್ದಾರೆ. ಆದರೆ ಹೊಸ ಕಾರ್ಖಾನೆಗಳಿಗಾಗಲೀ, ಉತ್ಪಾದನೆ ಹೆಚ್ಚಳಕ್ಕಾಗಲೀ ವಿದ್ಯುಚ್ಛಕ್ತಿ ಮಾತ್ರ ಸರಿಯಾಗಿ ಪೂರೈಸಲ್ಪಡುತ್ತಿಲ್ಲವಲ್ಲ.

ಮಾನವ ಜನಾಂಗದ ಅಭಿವೃದ್ಧಿಗೆ "ಕಮ್ಯುನಿಸಂ ಮತ್ತು ವಿದ್ಯುಚ್ಛಕ್ತಿ" ಅವಶ್ಯವೆಂದು ಬಹಳ ವರ್ಷಗಳ ಹಿಂದೆಯೇ ವಿ. ಐ. ಲೆನಿನ್ ಹೇಳಿದ್ದರು.

ವಿದ್ಯುಚ್ಛಕ್ತಿ ಉತ್ಪಾದನೆಯಲ್ಲಿ ಕರ್ನಾಟಕಕ್ಕೆ ಪ್ರಥಮ ಸ್ಥಾನವಿತ್ತು. ಕಾಂಗ್ರೆಸ್ ಆಡಳಿತ ಮುಂದುವರಿಯುತ್ತಿದ್ದಂತೆ ಸ್ಥಾನದ ಮಟ್ಟವೂ ಕೆಳಗಿಳಿಯುತ್ತಿದೆ. ವಿದ್ಯುತ್ ಉತ್ಪಾದನೆಗೆ ನಮ್ಮಲ್ಲಿ ಸಾಕಷ್ಟು ಅವಕಾಶಗಳಿವೆ. ವಿಜ್ಞಾನದಲ್ಲಿ ಕರ್ನಾಟಕವೇನೂ ಹಿಂದೆ ಬಿದ್ದಿಲ್ಲ. ಕಾಳಿ ಯೋಜನೆ ಕುಂಟುತ್ತಿದೆ. ಇತರ ಯೋಜನೆಗಳು ಭಿನ್ನಾಭಿಪ್ರಾಯದಲ್ಲಿ ಮುಳಗಿವೆ. ಈ ಯೋಜನೆಗಳನ್ನು ಪೂರ್ತಿಗೊಳಿಸಲು ಕಾಂಗ್ರೆಸ್ ಸರಕಾರ ವಿಫಲವಾಗಿದೆ. ಜನ ಎಚ್ಚೆತ್ತು ಈ ಯೋಜನೆಗಳೆಲ್ಲ ತೀವ್ರ ಪೂರ್ತಿಗೊಳ್ಳುವಂತೆ ಹೋರಾಡಬೇಕು. ಸರ್ವೋನ್ಮುಖ ಅಭಿವೃದ್ಧಿಗೆ ವಿದ್ಯುಚ್ಛಕ್ತಿ ಅತ್ಯಗತ್ಯ. ಇದರ ವಿಷಯದಲ್ಲಿ ನಿಷ್ಕಾಳಜಿಯಾಗಲೀ, ವಿಳಂಬವಾಗಲೀ ಸಲ್ಲ.

## ಮಂತ್ರಿಗಳಿಗೆ ಜಾತ್ರೆ— ಆಡಳಿತೆಗೆ ಅಮಾವಾಸ್ಯೆ

ಚುನಾವಣೆ ಸಮಿಪಿಸುತ್ತಿದ್ದಂತೆ ಮುಖ್ಯ ಮಂತ್ರಿಯನ್ನೊಳಗೊಂಡು ಎಲ್ಲ ಮಂತ್ರಿಗಳ ಜಾತ್ರೆ ಪ್ರಾರಂಭವಾಗಿದೆ. ಮೈಸೂರು ದಸರಾ ಮೆರವಣಿಗೆಯಂತೆ ಕರ್ನಾಟಕ ಮಂತ್ರಿಗಳ ಮೆರವಣಿಗೆಯೂ ದೇಶದ ಇತರ ಯಾವುದೇ ರಾಜ್ಯದಲ್ಲಿ ನಡೆಯದ ರೀತಿಯಲ್ಲಿ ಮುಂದುವರಿದಿದೆ. ಇದೇ ದುಂಡಗಿನ ಗುಂಡೂರಾಯರ ವೈಶಿಷ್ಟ್ಯ. ಹೋದ ತಿಂಗಳು ಗುಲ್ಬರ್ಗಾ ಜಿಲ್ಲೆಯಲ್ಲಿ ನಾಲ್ಕು ಮಂತ್ರಿಗಳ ಜಾತ್ರೆ ಮುಗಿಯಿತು. ಈಗ ಬಿಜಾಪುರ ಜಿಲ್ಲೆಯಲ್ಲಿ ಮೂರೂವರೆ ಗಂಟೆಯ ಕಾರ್ಯಕ್ರಮಕ್ಕೆ ಮಂತ್ರಿಗಳ ಸವಾರಿ. ಎಷ್ಟು ಭತ್ತೆ—ಪೆಟ್ರೋಲ್ ಹಾನಿ. ಎಷ್ಟು ಅಧಿಕಾರಿಗಳ—ನೌಕರದಾರರ ಸಮಯ ಹಾಳು. "ಯಾವ ಕೆಲಸ ಮಾಡಲೂ ಸಾಧ್ಯವಿಲ್ಲ ಈ ಮಂತ್ರಿಗಳ ಹಾವಳಿಯಿಂದಾಗಿ, 20 ಅಂಶಗಳ ಕಾರ್ಯಕ್ರಮಗಳು ಜ್ಯಾರಿಯಾಕಾಗಲಿಲ್ಲೆಂದು ಎಲ್ಲ ಮಂತ್ರಿಗಳೂ ಪ್ರಶ್ನೆಗಳ ಸುರಿಮಳೆಗರೆಯುತ್ತಾರೆ. ಮಂತ್ರಿಗಳಿಗೆ ಸರಬರಾಯಿ ಮಾಡುವುದನ್ನು ಬಿಡಿಸಿದರೆ, ನಾವು ಎಲ್ಲ ಕಾರ್ಯಕ್ರಮಗಳನ್ನೂ ಸರಿಯಾಗಿ ಮಾಡಿತೋರಿಸುತ್ತೇವೆ"ಂದು ನಿಷ್ಠಾವಂತ ಅಧಿಕಾರಿಗಳ ಆಲಾಪನೆಯಾಗಿದೆ.

ನೀರಾವರಿ ಕೆರೆ ನಿರ್ಮಾಣಗಳಿಗೆ ರೂ. 5 ಕೋಟಿ ಮಂಜೂರಿ, ಹಲವಾರು ನಗರ ಸಭೆಗಳಿಗೆ ಕುಡಿಯುವ ನೀರು ಪೂರೈಕೆ ಯೋಜನೆಗಳಿಗೆ ಮಂಜೂರಾತಿ, ಪ್ರತಿಯೊಂದು ಹಳ್ಳಿಗೂ ನೀರು, ವಿದ್ಯುತ್ ಪೂರೈಕೆ ಯೋಜನೆಗಳಿಗೆ ಕೊಟ್ಯಾವಧಿ ರೂ. ಮಿಸಲಾತಿ, ಕೃಷ್ಣಾ ಮೇಲ್ದಂಡೆ ಯೋಜನೆಯ ನೀರಾವರಿಗಾಗಿ ರೂ. 6 ಕೋಟಿ ಮಂಜೂರಿ, ರಸ್ತೆ ನಿರ್ಮಾಣಕ್ಕೆ, ಅದಕ್ಕೆ—ಇದಕ್ಕೆ—ಎಲ್ಲದಕ್ಕೂ ಹಣ ಮಂಜೂರಿ, ಮಂಜೂರಿ...ಏನಪ್ಪಾ ಇದು ಎಲ್ಲ ಕೆಲಸಕ್ಕೂ ಹಣ ಕೊಡ ಮಾಡಲಾಗಿದೆಂದು ಕೇಳಿದ ಹಳ್ಳಿ ಜನರೆಲ್ಲ ಮೂಗಿಗೆ ಬೊಟ್ಟು ಹಚ್ಚಿ ಆಶ್ಚರ್ಯದಿಂದ ಆಕಾಶದತ್ತ ನೋಡುವ ದೃಶ್ಯ ಹೃದಯ ದ್ರಾವಕ. ಇವೆಲ್ಲ ಚುನಾವಣೆಯ ಸ್ಟಂಟ್ ಎಂದು ಯಾರೋ ಹೇಳಿದ್ದುಂಟು.

ದಿ| ದೇವರಾಜ ಅರಸ್‌ರವರು ಮುಖ್ಯ ಮಂತ್ರಿಯಾಗಿದ್ದಾಗ ಜಿಲ್ಲೆಗೊಬ್ಬ ಮಂತ್ರಿಗಿಂತ ಹೆಚ್ಚು ಸಂಚಾರ ಮಾಡಬಾರದೆಂಬ ಆಡಳಿತೆಯ ನೀತಿ ಅನುಸರಿಸುತ್ತಿದ್ದರು. ಕಾಂ| ಇ.ಎಂ.ಎಸ್. ನಂಬೂದಿರಿ ಪಾದ್ ಅವರು ಕೇರಳದಲ್ಲಿ 1956ರಲ್ಲಿ ಪ್ರಥಮ ಕಮ್ಯುನಿಸ್ಟ್ ಸರಕಾರದ ಮುಖ್ಯ ಮಂತ್ರಿಯಾಗಿದ್ದಾಗ, ಸಚಿವಾಲಯಕ್ಕೆ ಸೈಕಲ್ ಸವಾರಿ ಮಾಡುತ್ತಿದ್ದರು. ಈಗ ಮುಖ್ಯ ಮಂತ್ರಿ ಗುಂಡೂರಾಯರು ಬಿಜಾಪುರ-ಗುಲ್ಬರ್ಗಾ ಜಿಲ್ಲೆಗಳಲ್ಲಿ 20-30 ಕಿಲೋ ಮಿಟರ್ ದೂರವನ್ನು ಹೆಲಿಕಾಪ್ಟರಿನಲ್ಲಿ ಸಂಚಾರ ಮಾಡುತ್ತಿದ್ದಾರೆ. ಜೊತೆಯಲ್ಲಿ 6-7 ಮಂತ್ರಿಗಳನ್ನು ಹೊತ್ತುಕೊಂಡು. ಸರಕಾರಿ ಖಜಾನೆಯ-ಸಾರ್ವಜನಿಕರ ಹೆಚ್ಚು ಹಣ ದುರ್ವ್ಯಯವಾಗುತ್ತಿದೆ, ಪೋಲಾಗುತ್ತಿದೆ. ಈ ರೀತಿ ಹಣ ಪೋಲಾಗುವುದರ ವಿರುದ್ಧ ಹೋರಾಡಬೇಕು. ಬರೇ ಆಶ್ವಾಸನೆಗಳಿಗೆ ಜನರು ಮರುಳಾಗುವುದಿಲ್ಲೆಂದು ಇತ್ತೀಚಿನ ರೈತ-ಕಾರ್ಮಿಕರ ಹೋರಾಟಗಳು ತೋರಿಸಿಕೊಟ್ಟಿವೆ. ಅವುಗಳಷ್ಟೇ ಸಾಲದು; ಅದಕ್ಕಿಂತಲೂ ತೀವ್ರವಾದ ಹೋರಾಟಗಳು ಬೇಕಾಗಿವೆ. ಜನರನ್ನು ಸಂಘಟಿಸಿ ಹೋರಾಟ ಮುಂದುವರಿಸೋಣ.

## ಸೌಲಭ್ಯ ಇಲ್ಲದೇ ಕಾಲೇಜ್ ಆರಂಭ

ಶಿಕ್ಷಕ ಸಿಬ್ಬಂದಿ, ಗ್ರಂಥಾಲಯ, ಪ್ರಯೋಗಾಲಯ, ಕಟ್ಟಡ, ಪೀಠೋಪಕರಣ ಮುಂತಾದ ಯಾವುದೇ ಸೌಲಭ್ಯ ಇಲ್ಲದಿದ್ದರೂ, ಜಿಲ್ಲೆಯಾದ್ಯಂತ ಪ್ರಥಮ ದರ್ಜೆ ಕಾಲೇಜುಗಳನ್ನು ಮನಬಂದಂತೆ ಆರಂಭಿಸುವ ಬಗ್ಗೆ ಇತ್ತೀಚೆಗೆ ನಡೆದ ಮಂಗಳೂರು ವಿಶ್ವವಿದ್ಯಾನಿಲಯದ ಸೆನೇಟ್ ಸಭೆಯಲ್ಲಿ ತೀವ್ರ ಅಸಮಾಧಾನ ವ್ಯಕ್ತ ಮಾಡಲಾಯಿತಂತೆ. ಕಾಂಗ್ರೆ ಪಕ್ಷದ ಸರಕಾರ ತನ್ನ ಅಧಿಕಾರ ಭದ್ರಗೊಳಿಸುವ ಸಲುವಾಗಿಯೇ ಖಾಸಗೀ ಜನರಿಗೆ, ಜಾತಿಯ ಆಧಾರದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಮಂಜೂರಾತಿ ನೀಡುತ್ತಿದೆಯೆಂದೂ, ಮಕ್ಕಳಿಗೆ ಉತ್ತಮ ಶಿಕ್ಷಣವಾಗಲೀ, ಸಿನೇಟ್ ಸದಸ್ಯರೇ ದೂರಿಕೊಂಡಂತೆ ಇತರ ಸೌಲಭ್ಯಗಳನ್ನು ಹೊಂದಿದ ಶಾಲೆ—ಕಾಲೇಜುಗಳಾಗಬೇಕೆಂಬ ಸದುದ್ದೇಶದಿಂದ ಅಲ್ಲ ಎಂಬ ಸಂಗತಿ ಶಿಕ್ಷಣ, ಸಂಸ್ಕೃತಿಯಲ್ಲಿ ಕರ್ನಾಟಕ ರಾಜ್ಯದಲ್ಲೇ ಮುಂದುವರಿದ ದಕ್ಷಿಣ ಕನ್ನಡದ ಸೆನೇಟ್ ಸದಸ್ಯರ ಮೆದುಳಿಗೆ ಹೊಳೆಯದಿರುವುದಕ್ಕೆ ಉತ್ತರ ಕರ್ನಾಟಕದ ಜನ ಆಶ್ಚರ್ಯಪಡುತ್ತಿದ್ದಾರೆ. ಮಂಗಳೂರು ವಿಶ್ವವಿದ್ಯಾನಿಲಯ ಸ್ಥಾಪನೆಯಾಗಿರುವುದು ಮೊನ್ನೆ ತಾನೆ. ಬೆಂಗಳೂರು-ಧಾರವಾಡ ವಿಶ್ವವಿದ್ಯಾನಿಲಯಗಳು ಬಹಳ ಹಳೆಯವು. ಕಳೆದ 20-25 ವರ್ಷಗಳಿಂದಲೂ ಪೀಠೋಪಕರಣ, ಉತ್ತಮ ಶಿಕ್ಷಕ, ಕಟ್ಟಡಗಳಿಲ್ಲದಿದ್ದರೂ ವಿದ್ಯಾರ್ಥಿಗಳಿಗೆ ಡಿಗ್ರಿ ದಯಪಾಲಿಸಿವೆ ಈ ವಿಶ್ವವಿದ್ಯಾಲಯಗಳು. ಸೆನೇಟ್

(7ನೇ ಪುಟ ನೋಡಿ)

## ರಾಯಚೂರು ಜಿಲ್ಲಾ ಸಮಾಚಾರಗಳು :

ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಗೋರ್ಕಲ್ ಗ್ರಾಮದಲ್ಲಿ 3—10—82 ರಂದು ರೈತ-ಕೃಷಿ ಕಾರ್ಮಿಕರ ಬಹಿರಂಗಸಭೆ ನಡೆಯಿತು. ಅಧ್ಯಕ್ಷತೆಯನ್ನು ಟಿ. ಡಿ. ಬಿ. ಸದಸ್ಯ ಶ್ರೀ ಸಿದ್ರಾಮಪ್ಪ ಅವರು ವಹಿಸಿದ್ದರು. ಶ್ರೀ ಶರಣಪ್ಪ ಅವರು ಸ್ವಾಗತಿಸಿದ ನಂತರ ರಾಮನಗೌಡ ಅವರು ಪ್ರಾಂತ ರೈತ ಸಂಘದ ಧ್ಯೇಯೋದ್ದೇಶಗಳ ಕುರಿತು ವಿವರಿಸಿದರು.

ಪ್ರಾಂತ ರೈತ ಸಂಘದ ಕಾರ್ಯದರ್ಶಿ ಕಾಂ| ಚಂದ್ರಶೇಖರ್ ಬಾಳೆಯವರು ಸಭೆಯನ್ನುದ್ದೇಶಿಸಿ ಮಾತನಾಡಿ, ರೈತ ಕಾರ್ಮಿಕರ ಬೇಡಿಕೆಗಳ ಕುರಿತು ಸುಳ್ಳು ಆಶ್ವಾಸನೆ ಕೊಡುತ್ತ, ವಿಶ್ವ ಕನ್ನಡ ಮೇಳ ಮತ್ತಿತರ ಕೆಲಸಗಳಿಗಾಗಿ ಕೋಟ್ಯಾಂತರ ರೂ. ಹಣವನ್ನು ದುಂದು ವೆಚ್ಚ ಮಾಡುತ್ತಿರುವುದನ್ನು ಖಂಡಿಸಿದರು. ಜನ ವಿರೋಧಿ ಸರಕಾರದ ವಿರುದ್ಧ ತೀವ್ರ ಹೋರಾಟಕ್ಕಿಳಿಯುವಂತೆ ಅವರು ಮನವಿ ಮಾಡಿದರು.

ಗೋರ್ಕಲ್ ಗ್ರಾಮ ಸೇರಿದಂತೆ ಸುತ್ತಲಿನ ಐದು ಹಳ್ಳಿಯ ಭೂಮಿಗೆ ನೀರೊದಗಿಸಲು, ಬೈಲ ಮರ್ಚೆಡ ಕೆರೆಯಿಂದ ಲಿಫ್ಟ್ ಇರಿಗೇಶನ್ ಕೈಗೊಳ್ಳಲು ಒತ್ತಾಯಿಸುವ ನಿರ್ಣಯ ಅಂಗೀಕರಿಸಿ, ಈ ಬೇಡಿಕೆಗಳಿಗಾಗಿ ಒತ್ತಾಯಿಸಿ ಕಾರ್ಯಕ್ರಮ ರೂಪಿಸಲು ನಿರ್ಧರಿಸಲಾಯಿತು.

### ಸಮಾವೇಶ ನಡೆಸಲು ತೀರ್ಮಾನ :

ರಾಯಚೂರು ತಾಲ್ಲೂಕಿನ ನಾಲ್ವತ್ತು ಹಳ್ಳಿಗಳು ತುಂಗಭದ್ರಾ ಎಡದಂಡೆ ಕಾಲುವೆ ತುದಿಯಿಂದ ನೀರನ್ನು ಪಡೆಯುತ್ತಿದ್ದು, ಮೇಲಿನ ಕಾಲುವೆಯಲ್ಲಿ ಕೆಲವು 'ಪುಢಾರಿ'ಗಳ ನೆರವಿನಿಂದ ನೀರು ವಿಪರೀತ ಪೋಲಾಗುತ್ತಿದೆ. ಇದರಿಂದ ಕೆಳದಂಡೆಯ ರೈತರು ಜೀಸತ್ತಿದ್ದು ಅಕ್ಟೋಬರ್ ಕೊನೆಯ ವಾರದಲ್ಲಿ ಈ ಕುರಿತು ಚರ್ಚಿಸಲು ನಾಲ್ವತ್ತು ಹಳ್ಳಿಗಳ ಪ್ರತಿನಿಧಿಗಳನ್ನು ಸೇರಿಸಿ ಸಮಾವೇಶವೊಂದನ್ನು ನಡೆಸಲು ತೀರ್ಮಾನಿಸಲಾಯಿತು.

ಇತ್ತೀಚಿಗೆ ನಡೆದ ರೈತ ಸಂಘ ತಾಲ್ಲೂಕು ಸಮಿತಿಯ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದ್ದು, ಸಮಾವೇಶಕ್ಕೆ ಪ್ರಾಂತ ರೈತ ಸಂಘದ ಅಧ್ಯಕ್ಷರನ್ನು ಆಹ್ವಾನಿಸಲು ತೀರ್ಮಾನಿಸಲಾಯಿತು.

### ಶಿರ್ಸಿ :

#### ನೂತನ ಘಟಕ ರಚನೆ

26—9—82 ರಂದು ಶಿರ್ಸಿ ತಾಲ್ಲೂಕಿನ ಬಂಡಲ್ ಗ್ರಾಮದಲ್ಲ ರೈತ—ಕೃಷಿ ಕೂಲಿಕಾರರ ಸಭೆ ನಡೆಯಿತು. ಮುಖ್ಯ ಅತಿಥಿಗಳಾಗಿ ನ್ಯಾಯವಾದಿ ಎಂ. ಎಸ್. ಧಾರೇಶ್ವರ ಅವರು ಆಗಮಿಸಿದ್ದರು. ಅಧ್ಯಕ್ಷತೆಯನ್ನು ತಾಲ್ಲೂಕು ರೈತ ಸಂಘದ ಅಧ್ಯಕ್ಷ ಬಂಗಾರೇಶ್ವರ ಗೌಡ ಅವರು ವಹಿಸಿದ್ದರು.

# ರೈತ ಸಂಘದ ಚಟುವಟಿಕೆಗಳು

ರೈತ ಸಂಘದ ಬಂಡಲ್ ಗ್ರಾಮ ಘಟಕವನ್ನು ಆರಂಭಿಸಲು ತೀರ್ಮಾನಿಸಲಾಯಿತು. ಚುನಾಯಿತ ನೂತನ ಸಮಿತಿಗೆ ನಾರಾಯಣಗೌಡ ಶ್ಯಾನಭಾಗ ಅವರು ಅಧ್ಯಕ್ಷರಾಗಿ ಆಯ್ಕೆಗೊಂಡರು. 15 ಜನ ಕಾರ್ಯಕಾರೀ ಸಮಿತಿಯ ಸದಸ್ಯರನ್ನೂ ಆಯ್ಕೆ ಮಾಡಲಾಯಿತು.

29—9—82 ರಂದು ಪದಾಧಿಕಾರಿಗಳ ಸಭೆ ನಡೆದು ಕೆಲವು ಸ್ಥಳೀಯ ಸಮಸ್ಯೆಗಳ ಕುರಿತು ಚರ್ಚಿಸಿ, ಸಮಸ್ಯೆಗಳ ಪರಿಹಾರಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳನ್ನು ಒತ್ತಾಯಿಸಬೇಕೆಂದು ತೀರ್ಮಾನಿಸಲಾಯಿತು.

### ಸವದತ್ತಿ :

#### ಲಮಾಣಿ ಜನರಿಗೆ ಭೂಮಿಗಾಗಿ ಆಗ್ರಹ

ಇತಿಹಾಸದ ಕ್ರೌರ್ಯಕ್ಕೆ ಬಲಿಯಾಗಿ ಗುಡ್ಡ ಸೇರಿ ಕಾಡುಪಶುಗಳೊಂದಿಗೆ ಬದುಕನ್ನು ಸಾಗಿಸಿಕೊಂಡು ಬಂದ ಲಮಾಣಿ [ಲಂಬಾಣಿ' ಜನರು ಕಷ್ಟಪಟ್ಟು ಸಾಗುಮಾಡಿಕೊಂಡು ಬಂದ ಬಂಜರು ಜಮೀನನ್ನು ಕೂಡಲೇ ಅವರಿಗೆ ವಿತರಿಸಬೇಕೆಂದು ನಿತ್ಯಾನಂದ ಸ್ವಾಮೀಜಿ ಒತ್ತಾಯಿಸಿದ್ದಾರೆ. ಅವರು 14—9—82 ರಂದು ಕಾರ್ಲಕಟ್ಟೆ ತಾಂಡೆಯ ರೈತ ಹಾಗೂ ರೈತ ಕೂಲಿಕಾರರ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು. ಸಭೆಯ ಅಧ್ಯಕ್ಷತೆಯನ್ನು ಕಾ| ಕಪ್ಪಣ್ಣನವರು ವಹಿಸಿದ್ದರು.

ಪ್ರಗತಿಪರ ಭೂ ಸುಧಾರಣೆಗಾಗಿ ಹೋರಾಟ ಮಾಡುತ್ತಿರುವ ಕರ್ನಾಟಕ ಪ್ರಾಂತ ರೈತ ಸಂಘವು ಸವದತ್ತಿ ತಾಲ್ಲೂಕಿನಲ್ಲಿರುವ ಒಂಬತ್ತು ತಾಂಡೆಗಳ ಲಮಾಣಿ ಸಮಾಜ ಪರಿಷತ್ತೊಂದನ್ನು ಶೀಘ್ರದಲ್ಲೇ ಕರೆದು, ಭೂ ಹೀನರಿಗೆ ಭೂಮಿಯನ್ನು ದೊರಕಿಸುವುದಕ್ಕಾಗಿ ಸತ್ಯಾಗ್ರಹದ ಕಾರ್ಯಕ್ರಮವನ್ನು ರೂಪಿಸಲಿದೆ ಎಂದೂ ನಿತ್ಯಾನಂದ ಸ್ವಾಮೀಜಿ ಹೇಳಿದರು.

### ಸುಳ್ಯ :

ದ. ಕ. ಜಿಲ್ಲೆಯ ಸುಳ್ಯ ತಾಲ್ಲೂಕಿನ ಗುತ್ತಿಗಾರು ಗ್ರಾಮದ ಕಮಿಲ ಎಂಬಲ್ಲಿ 9-10-82 ರಂದು ರೈತ ಸಂಘದ ತಾಲ್ಲೂಕು ಸಮಿತಿಯ ಆಶ್ರಯದಲ್ಲಿ ಬಹಿರಂಗ ಸಭೆ ನಡೆಯಿತು. ಸಭೆಗೆ ಸುತ್ತಮುತ್ತಲಿನ ರೈತರು 3 ಮೈಲಿ ಕಾಲ್ನಡಿಗೆಯಿಂದ ಮೆರವಣಿಗೆಯಲ್ಲಿ ಆಗಮಿಸಿದ್ದರು.

ಸಭೆಯನ್ನುದ್ದೇಶಿಸಿ ತಾಲ್ಲೂಕು ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಂ| ಕೆ. ಮೋನಪ್ಪಗೌಡ ಅವರು ಮಾತನಾಡಿ ರೈತರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ವಿವರಿಸಿದರು.

ಕಾರ್ಯದರ್ಶಿ ಕಾಂ| ಭಾಸ್ಕರರಾವ್ ಇವರು ಮಾತನಾಡಿ ರಾಜಕೀಯ ತಿಳುವಳಿಕೆ ಪಡೆದುಕೊಳ್ಳುವಂತೆ ರೈತ ಬಾಂಧವರಿಗೆ ಮನವಿ ಮಾಡಿದರು.

ಆರಂಭದಲ್ಲಿ ಕಾಂ| ಬಾಲಕೃಷ್ಣಗೌಡ ಸ್ವಾಗತಿಸಿದರು.

### ಉಳ್ಳಾಲ :

ಮಂಗಳೂರು ತಾಲ್ಲೂಕಿನ ಉಳ್ಳಾಲದಲ್ಲಿ 1-10-82 ರಂದು ಗ್ರಾಮ ಘಟಕದ ಸಭೆ ನಡೆಯಿತು. ಅಧ್ಯಕ್ಷತೆಯನ್ನು ಕಾಂ| ಯು. ಪಿ. ಡಿಸೋಜ ವಹಿಸಿದ್ದರು.

ಸಭೆಯು ರೈತರ ಹಾಗೂ ಗ್ರಾಮದ ವಿವಿಧ ಸಮಸ್ಯೆಗಳ ಬಗ್ಗೆ ಚರ್ಚಿಸಿ, ಈ ಕೆಳಗಿನ ನಿರ್ಣಯಗಳನ್ನು ಸ್ವೀಕರಿಸಿತು.

1. ಪ್ರಾಂತ ರೈತ ಸಂಘವು ಕರ್ನಾಟಕ ಸರಕಾರಕ್ಕೆ ಅರ್ಪಿಸುವ ಮನವಿಗೆ ಗ್ರಾಮದಲ್ಲಿ ಸಾಮೂಹಿಕ ಸಹಿ ಸಂಗ್ರಹದ ಕೆಲಸ ಪೂರ್ತಿ ನಡೆಸಬೇಕೆಂದು ತೀರ್ಮಾನಿಸಿತು.

2. ತೊಕ್ಕೋಟಿನಲ್ಲಿ ಬಸ್ ನಿಲ್ಲುವ ನಿಲ್ದಾಣಕ್ಕೆ ದಿನಾ ಸಾವಿರಾರು ಮಂದಿ ಪ್ರಯಾಣಿಕರು ಬರುವ ಮುಖ್ಯ ಸ್ಥಳವಾಗಿದೆ. ಇಲ್ಲಿ ಪ್ರಯಾಣಿಕರ ಅನುಕೂಲತೆಗಾಗಿ "ತಂಗುದಾಣ"ವೊಂದನ್ನು ಕೂಡಲೇ ರಚಿಸಬೇಕೆಂದು ಜಿಲ್ಲಾಧಿಕಾರಿಯವರನ್ನು ವಿನಂತಿಸಲಾಗಿದೆ.

3. ತೊಕ್ಕೋಟಿನಿಂದ ಉಳ್ಳಾಲ ರೈಲ್ವೇ ಸೇತುವೆಗೆ ಹೋಗುವ ರಸ್ತೆಯು ತೀರಾ ಹಾಳಾಗಿದೆ. ಈ ರಸ್ತೆಯನ್ನು ಕೂಡಲೇ ದುರುಸ್ತಿಗೊಳಿಸಬೇಕೆಂದು ಜಿಲ್ಲಾಧಿಕಾರಿಯವನ್ನು ವಿನಂತಿಸಲಾಗಿದೆ.

4. ನೇತ್ರಾವತಿ ಹೈವೇ ಸೇತುವೆಯ ದಕ್ಷಿಣ ದಿಕ್ಕಿನಲ್ಲಿ ತಂಗುದಾಣವೊಂದನ್ನು ರಚಿಸಬೇಕು.

5. ಉಳ್ಳಾಲ ಉಳಿಯ ಹೊಗೆ ನಡುವೆ ಇರುವ ಕಿರು ನದಿಗೆ ಸೇತುವೆಯೊಂದನ್ನು ರಚಿಸಬೇಕು.

6. ಉಳ್ಳಾಲ ಉಳಿಯದಿಂದ ಉಳ್ಳಾಲಪೇಟೆ ಹೋಗುವ ಕಿರು ನದಿಗಿರುವ ಸೇತುವೆ ಹಾಳಾಗಿದೆ. ಇಲ್ಲಿ ಸೇತುವೆಯೊಂದನ್ನು ರಚಿಸಬೇಕು.

7. ಉಳ್ಳಾಲ ನೇತ್ರಾವತಿ ನದಿ ಬದಿಗೆ ಕಲ್ಲಿನ ದಂಡೆಯೊಂದನ್ನು ನಿರ್ಮಿಸಿ, ವರ್ಷ ವರ್ಷ ನೆರೆಯಿಂದ ನಿವಾಸಿಕರು ಅನುಭವಿಸಬೇಕಾದ ನಷ್ಟವನ್ನು ತಪ್ಪಿಸಲು ಕ್ರಮಕೈಗೊಳ್ಳಬೇಕು.

ನಗರಾಸ್ತಿ ಮಿತಿ ಕಾಯಿದೆಯ ಪರಿಣಾಮವಾಗಿ ಇದೀಗ ರೈತರು ತೊಂದರೆಗೊಳಗಾಗಿದ್ದಾರೆ. ಈ ಕಾಯಿದೆಯಂತೆ ರೈತರಿಗೆ ಸಂಬಂಧಪಟ್ಟ ಕಛೇರಿಯಿಂದ ನೋಟೀಸು ಜ್ಯಾರಿಯಾಗಿದ್ದು, ಭೂಮಿಯ ನಕ್ಷೆಗೆ ಅರ್ಜಿ, ಕೆಲಸ ಕಾರ್ಯಬಿಟ್ಟು ಕಚೇರಿಗೆ ಬರಲು ನೋಟೀಸು ಈ ಎಲ್ಲಾ ರೀತಿಯ ಕಷ್ಟಗಳನ್ನು ರೈತರು ಅನುಭವಿಸಬೇಕಾದ ಪ್ರಸಂಗ ಬಂದಿದೆ.

ಆದುದರಿಂದ ಕೃಷಿ ಭೂಮಿಯನ್ನು ಈ ಕಾಯಿದೆಯಿಂದ ಹೊರತುಪಡಿಸಬೇಕೆಂದು ಸರಕಾರವನ್ನು ಈ ಸಭೆಯು ವಿನಂತಿಸಿಕೊಂಡಿದೆ. ಈ ಕಾಯಿದೆಯಲ್ಲಿ ತಿದ್ದುಪಡಿ ತರುವಂತೆ ಒತ್ತಾಯಿಸಲು ರೈತರ ಸಭೆಯೊಂದನ್ನು ಜರುಗಿಸಲು ತೀರ್ಮಾನಿಸಲಾಯಿತು.

### ತುಮಕೂರು :

#### ಜಿಲ್ಲಾ ರೈತ ಸಮ್ಮೇಳನ

ಕರ್ನಾಟಕ ಪ್ರಾಂತ ರೈತ ಸಂಘದ ತುಮಕೂರು ಜಿಲ್ಲಾ ರೈತ ಸಮ್ಮೇಳನವು ತುಮಕೂರಿನ ಶ್ರೀಮತಿ ಸಾವಿತ್ರಮ್ಮನವರ ಕಲ್ಯಾಣ ಮಂದಿರದಲ್ಲಿ ತಾ|| 11—10—82ನೇ ಸೋಮವಾರದಂದು ನಡೆಯಿತು. ಸಮ್ಮೇಳನದ ಅಧ್ಯಕ್ಷತೆಯನ್ನು ಕಾಂ| ಟಿ. ಕೆ. ಗೋವಿಂದರಾಜುರವರು ವಹಿಸಿದ್ದರು.

ಜಿಲ್ಲಾ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿಗಳಾದ ಕಾಂ| ಕೆ.ಆರ್.ನಾಯಕ್‌ರವರು ಸಮ್ಮೇಳನವನ್ನು ಉದ್ಘಾಟಿಸುತ್ತಾ, ಜಗತ್ತಿನ ಮೂರನೇ ಒಂದು ಭಾಗಕ್ಕಿಂತಲು ಹೆಚ್ಚು ದೇಶಗಳಲ್ಲಿ ರೈತ ಕಾರ್ಮಿಕರದೇ ರಾಜ್ಯ ಬಂದಿದೆ. ಕಳೆದ ಸುಮಾರು 50 ವರ್ಷಗಳಿಂದ ಅಖಿಲ ಭಾರತ ಕಿಸಾನ್ ಸಭಾವು ಅತಂತ್ಯ ಶೋಷಣೆಗೆ ಒಳಪಟ್ಟ ಸಣ್ಣ ರೈತರು, ಕೃಷಿ ಕಾರ್ಮಿಕರನ್ನು ಸಂಘಟಿಸುವುದರಲ್ಲಿ ಶ್ರಮಿಸುತ್ತ ಬಂದಿದೆ. ಇಂದು ಏನಾದರು ಅಲ್ಪ ಸ್ವಲ್ಪ ಜಾಗೃತಿ ರೈತರಲ್ಲಿ ಮೂಡಿದ್ದರೆ ಅದು ಅಖಿಲ ಭಾರತ ಕಿಸಾನ್ ಸಭೆಯ ಪರಿಶ್ರಮದ ಫಲವೇ ಆಗಿದೆಯೆಂದು ತಿಳಿಸುತ್ತಾ, ನಮ್ಮ ಜಿಲ್ಲೆಯ ರೈತರಲ್ಲಿ ಹೊಸ ಪ್ರಜ್ಞೆ ಮೂಡಿಸುವಲ್ಲಿ ಈ ಸಮ್ಮೇಳನ ಫಲಪ್ರದವಾಗಲೆಂದು ಹಾರೈಸಿದರು. ನಂತರ ಜಿಲ್ಲಾ ರೈತ ಸಂಘದ ಕಾರ್ಯದರ್ಶಿಗಳಾದ ಕಾಂ| ಹೆಚ್.ಸಿ.ಚನ್ನಪ್ಪನವರು ವರದಿಯನ್ನು ಮಂಡಿಸಿ ಹಿಂದಿಗಿಂತ ಇಂದು ಸಂಘಟನೆಯ ಅವಶ್ಯಕತೆ ಹೆಚ್ಚಿದ್ದು, ಸಂಘಟನೆ ಬಲಪಡಿಸಬೇಕೆಂದು ಕರೆ ನೀಡಿದರು.

ನಂತರ ನಡೆದ ಚರ್ಚೆಯಲ್ಲಿ ಹತ್ತು ಜನ ಪ್ರತಿನಿಧಿಗಳು ಭಾವಹಿಸಿದ್ದರು. ಅಂತರರಾಷ್ಟ್ರೀಯ ರಾಷ್ಟ್ರೀಯ, ಪ್ರಾಂತ್ಯ ಮಟ್ಟದಲ್ಲೂ, ಜಿಲ್ಲಾ ಮತ್ತು ಸ್ಥಳೀಯ ಸಮಸ್ಯೆಗಳ ಬಗ್ಗೆ ಹಲವಾರು ನಿರ್ಣಯಗಳನ್ನು ಅಂಗೀಕರಿಸಲಾಯಿತು. 800 ಜನ ಪ್ರತಿನಿಧಿಗಳು ಭಾಗವಹಿಸಿದ ಈ ಕೃಷಿ ಕಾರ್ಮಿಕರನ್ನೊಳಗೊಂಡ ಸಮ್ಮೇಳನದಲ್ಲಿ ಸುಮಾರು 150 ಜನ ಮಹಿಳಾ ಪ್ರತಿನಿಧಿಗಳೇ ಇದ್ದರು.

ಸಭೆಗೆ ಮುಂಚೆ ಕಾಂ| ಕೋದಂಡರಾಂರವರು ಕ್ರಾಂತಿಗೀತೆಗಳನ್ನು ಹಾಡಿದರು. ತಿಪಟೂರಿನ ವಕೀಲರಾದ ಕಾಂ| ಬಿ. ಡಿ. ರಾಮಯ್ಯನವರು, ಜಿಲ್ಲಾ ಜನತಾ ಪಕ್ಷದ ಅಧ್ಯಕ್ಷರಾದ ಶ್ರೀ ಲಕ್ಷ್ಮೀ ನರಸಿಂಹಯ್ಯನವರು ಭಾಷಣ ಮಾಡಿದರು. ನಂತರ ಕೊನೆಯಲ್ಲಿ ಕಾಂ| ಅಂಜನಪ್ಪನವರಿಂದ ವಂದನಾರ್ಪಣೆ ನಡೆಯಿತು.

ಸಮ್ಮೇಳನದ ನಂತರ ಡೋಲು, ತಮಟೆ, ವಾದ್ಯಗಳ ಸಮೇತ ಕೆಂಪು ಬಾವುಟಗಳನ್ನು ಹಿಡಿದು ರೈತ—ಕೃಷಿ ಕೂಲಿಕಾರರ ಆಕರ್ಷಣೀಯ ವರ್ಣರಂಜಿತ ಮೆರವಣಿಗೆಯು ನಗರದ ಪ್ರಮುಖ ಬೀದಿಗಳಲ್ಲಿ ನಡೆದು ಜಿಲ್ಲಾಧಿಕಾರಿಗಳ ಕಛೇರಿ ತಲುಪಿತು. ಜಿಲ್ಲಾಧಿಕಾರಿಗಳು ತಮ್ಮ ಕಛೇರಿಯಿಂದ ಎದ್ದು ಬಂದು ರೈತ ಮುಖಂಡರುಗಳನ್ನು ರೈತರುಗಳನ್ನು ಭೇಟಿ ಮಾಡಿ ಮನವಿ ಸ್ವೀಕರಿಸಿ ಬೇಡಿಕೆಗಳು ಈಡೇರಲು ತಮ್ಮ ಎಲ್ಲಾ ಸಹಾಯ ಮಾಡುವುದಾಗಿ ಭರವಸೆ ಕೊಟ್ಟರು. ಸಮ್ಮೇಳನದಲ್ಲಿ 20 ಜನರನ್ನೊಳಗೊಂಡ ಹೊಸ ಜಿಲ್ಲಾ ಕಾರ್ಯಕಾರೀ ಸಮಿತಿಯನ್ನು ರಚಿಸಲಾಯಿತು. ಕಾಂ| ಟಿ. ಕೆ. ಗೋವಿಂದರಾಜು ಅಧ್ಯಕ್ಷರು, ಕಾಂ| ಬಡೇ ಸಾಹೀಬ್, ಶ್ರೀ ಪಂಡಿತ್ ದಾಸಪ್ಪ ಉಪಾಧ್ಯಕ್ಷರುಗಳಾಗಿಯೂ, ಕಾಂ| ಹೆಚ್.ಸಿ.ಚನ್ನಪ್ಪನವರನ್ನು ಕಾರ್ಯದರ್ಶಿಗಳಾಗಿಯೂ, ಕಾಂ| ಬಿ.ಎಲ್. ತಿಮ್ಮಪ್ಪನವರನ್ನು ಖಜಾಂಚಿಗಳನ್ನಾಗಿಯೂ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಜಿಲ್ಲೆಯಲ್ಲಿ ಮಳೆಬಾರದೇ ಪರಿಸ್ಥಿತಿ ಗಂಭೀರವಾಗಿರುವುದನ್ನು ಗಮನಿಸಿದ ಸಮ್ಮೇಳನವು ಪರಿಹಾರ ಕಾಮಗಿರಿಗಳನ್ನು ಪ್ರಾರಂಭಿಸುವಂತೆ ಒತ್ತಾಯಿಸಿದೆ. ಜೀವನಾವಶ್ಯಕ ವಸ್ತುಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ವಿತರಣೆ ಮಾಡಬೇಕು; ಬಂಜರು ಮತ್ತು ಹೆಚ್ಚುವರಿ ಜಮೀನನ್ನು ಭೂಹೀನ ಬಡವರಿಗೆ ಹಂಚಬೇಕು; ಗ್ರಾಮಾಂತರ ಪ್ರದೇಶಗಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಬೇಕು; ಜಿಲ್ಲೆಯ ಎಲ್ಲ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಒದಗಿಸಬೇಕು...ಎಂಬಿತ್ಯಾದಿ ಬೇಡಿಕೆಗಳಿಗಾಗಿ ಒತ್ತಾಯಿಸಿ ನಿರ್ಣಯಗಳನ್ನು ಅಂಗೀಕರಿಸಲಾಯಿತು.

# ನೆರೆಹೊರೆ

### ಉತ್ತರ ಪ್ರದೇಶ

## ಮೋಸಗಾರ ಮಾಲೀಕರಿಗೆ ಕಾಂಗ್ರೆಸ್ (ಐ) ಸರಕಾರದ ಬೆಂಬಲ

ಬುಲಂದ್‌ಶಹರ್‌ನ ಪನ್ನೀಜಿ ಸಕ್ಕರೆ ಕಾರ್ಖಾನೆಯ ಕಾರ್ಮಿಕರು ಹಾಗೂ ಅವರನ್ನವಲಂಬಿಸಿರುವ ಹತ್ತು ಸಾವಿರ ಜನ ತೀವ್ರ ಸಂಕಷ್ಟದಲ್ಲಿದ್ದಾರೆ. ಈ ಕಾರ್ಖಾನೆಯ ಮಾಲೀಕರು ಕಾರ್ಮಿಕರಿಗೆ ಕೊಡಬೇಕಾಗಿದ್ದ 40 ಲಕ್ಷ ರೂಪಾಯಿ ಕೊಡದೆ ಅವರನ್ನು ಉಪವಾಸ ಕೆಡವಿದ್ದಾರೆ. ಅಲ್ಲದೆ ಕಾರ್ಮಿಕರ ಭವಿಷ್ಯ ನಿಧಿಗೆ ಸಲ್ಲಿಸಬೇಕಾಗಿದ್ದ 22 ಲಕ್ಷ ರೂಪಾಯಿಗಳನ್ನು ಇನ್ನೂ ಕೊಟ್ಟಿಲ್ಲ. ಈ ರೀತಿ ಕಾನೂನು, ನಿಯಮಗಳನ್ನು ಉಲ್ಲಂಘಿಸುತ್ತಿರುವ ವ್ಯವಸ್ಥಾಪಕರನ್ನು ಶಿಕ್ಷಿಸುವ ಬದಲು ಉತ್ತರ ಪ್ರದೇಶದ ಕಾಂಗ್ರೆಸ್ (ಐ) ಸರಕಾರ ತಾನೇ ಎಲ್ಲಾ ನೀತಿ-ನಿಯಮಗಳನ್ನು ಮುರಿದು, ಅವರ ಸಂಕಷ್ಟಗಳ ಬಗ್ಗೆ ಉದಾಸೀನತೆ ತೋರಿ ಬಡ ಕಾರ್ಮಿಕರ ಜೀವದೊಂದಿಗೆ ಚೆನ್ನಾಟವಾಡುತ್ತಿದೆ. ಸಿ. ಐ. ಟಿ. ಯು. ನ ಉತ್ತರ ಪ್ರದೇಶ ರಾಜ್ಯ ಸಮಿತಿ ಸರಕಾರದ ಈ ನಿರ್ಲಕ್ಷ್ಯ ಭಾವವನ್ನು ತೀವ್ರವಾಗಿ ಖಂಡಿಸಿದೆ.

ರಾಜ್ಯದ ಸಣಬು ಕೈಗಾರಿಕೆಯ ಕಾರ್ಮಿಕರೂ ತಮ್ಮ ತೊಂದರೆಗಳನ್ನು ಕಾಂಗ್ರೆಸ್ (ಐ) ಸರಕಾರದ ಮುಂದೆ ಹಲವು ಬಾರಿ ನಿವೇದಿಸಿಕೊಂಡರೂ ಅವೆಲ್ಲಾ ಬಗೆಹರಿಯದೆ ಉಳಿದುಕೊಂಡಿವೆ. ಸರಕಾರ ತಾನು ಕೊಟ್ಟ ವಚನವನ್ನೂ ಪಾಲಿಸುತ್ತಿಲ್ಲ. ಹೆಚ್ಚಿನ ಬೋನಸ್‌ಗಾಗಿ 90 ದಿನಗಳಿಂದ ಜೆ.ಕೆ. ಸಣಬು ಗಿರಣಿಯಲ್ಲಿ ನಡೆಯುತ್ತಿರುವ ಮುಷ್ಕರವನ್ನು ನಿಷೇಧಿಸಿ ಕಾಂಗ್ರೆಸ್ (ಐ) ಸರಕಾರ ಆಜ್ಞೆ ಹೊರಡಿಸಿದೆ. ಪಶ್ಚಿಮ ಬಂಗಾಳದ ಸಣಬು ಕಾರ್ಮಿಕರು ಪಡೆಯುವಂತೆ ಯೋಗ್ಯವಾದ ಸಂಬಳ ಹಾಗೂ ಭತ್ಯೆಗಳನ್ನು ಉತ್ತರ ಪ್ರದೇಶದ ಸಣಬು ಕಾರ್ಮಿಕರಿಗೆ ಸಿಗುತ್ತಿಲ್ಲವಾದ್ದರಿಂದ ಈ ಕಾರ್ಮಿಕರ ಆಂದೋಲನವನ್ನು ಸಂಘಟಿಸಲು ರಾಜ್ಯ ಸಿ.ಐ.ಟಿ.ಯು. ನಿರ್ಧರಿಸಿದೆ.

### ತಮಿಳುನಾಡು

## ಕಾಂಗ್ರೆಸ್ (ಐ) ನಂತೆಯೇ ಕಾರ್ಮಿಕ ವಿರೋಧಿ ಸರಕಾರ

ಸಂಸತ್ತಿನಲ್ಲಿ ಹಾಗೂ ಹೊರಗೆ ಕಾಂಗ್ರೆಸ್ (ಐ) ನ ಪರವಾಗಿ ಕೈಯೆತ್ತುತ್ತಾ ಬಂದಿರುವ ಎ.ಐ.ಎ.ಡಿ.ಎಂ.ಕೆ.ಯ ತಮಿಳುನಾಡು ಸರಕಾರ ಕಾರ್ಮಿಕ ವಿರೋಧಿ ಧೋರಣೆಗಳಲ್ಲೂ ದಿಲ್ಲೀ ಅಧಿಪತಿಗಳನ್ನೇ ಹಿಂಬಾಲಿಸುತ್ತಿದ್ದಾರೆ. ಆಳುವ ಪಕ್ಷಕ್ಕೆ ನಿಷ್ಠವಾಗಿದ್ದು, ಅದರ ಎಲ್ಲಾ ಕಾರ್ಮಿಕ ವಿರೋಧಿ ಕ್ರಮಗಳಿಗೂ ಬೆಂಬಲ ನೀಡುವ ಕಾರ್ಮಿಕ ಸಂಘಗಳನ್ನು ನಿಜವಾದ ಪ್ರಾತಿನಿಧ್ಯ ಹೊಂದಿದ ಯೂನಿಯನ್‌ಗಳ ಸ್ಥಾನದಲ್ಲಿ ಹೇರಲು ಪ್ರಯತ್ನಿಸುವುದು, ಸಿ.ಐ.ಟಿ.ಯು. ಸಂಘಗಳನ್ನು ಕಾರ್ಯನಿರ್ವಹಿಸದಂತೆ ಮಾಡುವುದು, ಮುಷ್ಕರಗಳು ನಡೆಯುತ್ತಿರುವಾಗ ಅವನ್ನು ಮುರಿಯಲು ಮಾಲೀಕರಿಗೆ ಪೋಲೀಸ್‌ನ ಹಾಗೂ ಕರಿಗಾಲುಗಳ ಸಹಾಯ ಒದಗಿಸುವುದು, ಟ್ರೇಡ್ ಯೂನಿಯನ್ ವ್ಯವಹಾರಗಳಲ್ಲಿ ಮೂಗು ತೂರಿಸುವುದು ಇತ್ಯಾದಿಗಳ ಮೂಲಕ ಎಂ.ಜಿ.ಆರ್. ಸರಕಾರ ಬೆಳೆಯುತ್ತಿರುವ ಕಾರ್ಮಿಕ ಚಳುವಳಿಯನ್ನು ದಮನ ಮಾಡಲು ಪ್ರಯತ್ನಿಸುತ್ತಿದೆ. ತಾನೇ ಜ್ಯಾರಿಗೊಳಿಸಿದ ಕಾನೂನುಗಳನ್ನು ಸ್ವತಃ ಉಲ್ಲಂಘಿಸಿ, ಖಾಸಗೀ ಮಾಲೀಕರಿಗೆ ಮಾರ್ಗದರ್ಶನ ನೀಡುತ್ತಿದೆ ಈ ಸರಕಾರ! ತಾತ್ಕಾಲಿಕ ನೌಕರರನ್ನು ಖಾಯಂಗೊಳಿಸುವ ಒಂದು ಕಾನೂನು ಇದಕ್ಕೆ ಉದಾಹರಣೆ. ಇದನ್ನು ಖಾಸಗೀ ಮಾಲೀಕರು ಜ್ಯಾರಿಗೊಳಿಸುತ್ತಿಲ್ಲ ಮಾತ್ರವಲ್ಲ ಸರಕಾರೀ ಆಡಳಿತದ ಸಂಸ್ಥೆಗಳೂ ಪಾಲಿಸುತ್ತಿಲ್ಲ. ಈ ಎಲ್ಲಾ ಕಾರ್ಮಿಕ ವಿರೋಧಿ ಕ್ರಮಗಳಿಗೆ ತಮ್ಮ ಪ್ರತಿಭಟನೆ ಸೂಚಿಸಲು ಸೆಪ್ಟೆಂಬರ್ 13 ರಂದು ರಾಜ್ಯಾದ್ಯಂತ ಸಿ. ಐ. ಟಿ. ಯು. ನೇತೃತ್ವದಲ್ಲಿ ಪ್ರತಿಭಟನಾ ದಿನವನ್ನು ಆಚರಿಸಲಾಯಿತು.

### ಕೇರಳ

## ಸತ್ಯ ಬೆಳಕಿಗೆ ಬರದಿರಲು ವಿಚಾರಣಾ ಆಯೋಗದ ವಿಸರ್ಜನೆ

ರಾಜ್ಯದೊಳಗೆ ಸರಿಯಾದ ಪರ್ಮಿಟುಗಳಿಲ್ಲದೆ ಬೇರೆಡೆಯಿಂದ ಅಗಾಧ ಪ್ರಮಾಣದಲ್ಲಿ ಸ್ಪಿರಿಟ್‌ನ್ನು ಅಕ್ರಮವಾಗಿ ಸಾಗಿಸಿ ಸರಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟವುಂಟು ಮಾಡುತ್ತಿರುವ ಅಬ್ಕಾರಿ ಗುತ್ತೇದಾರಿಗಳ ಬಗ್ಗೆ ವಿಚಾರಣೆ ನಡೆಸಲು ಎಡ-ಪ್ರಜಾಪ್ರಭುತ್ವ ರಂಗದ ಸರಕಾರ ಸದಾಶಿವನ್ ಆಯೋಗ ನೇಮಿಸಿತ್ತು. ತಮಿಳುನಾಡಿನ ಸರಕಾರವೂ ಇದೇ ತರದ ಆಯೋಗ ನೇಮಿಸಿತ್ತು. ನಂತರ ಕೇಂದ್ರ ಸರಕಾರವೂ ಈ ಬಗ್ಗೆ ಆಯೋಗ ನೇಮಿಸಿತು. ಕೇಂದ್ರ ಸರಕಾರ ವಿಚಾರಣಾ ಆಯೋಗ ನೇಮಿಸಿದ್ದರಿಂದ ಕೇರಳ, ತಮಿಳುನಾಡುಗಳ ವಿಚಾರಣಾ ಆಯೋಗಗಳಿಗೆ ವಿಚಾರಣೆ ನಡೆಸುವ ಅಧಿಕಾರವಿಲ್ಲ ಎಂದು ಕಾಂಗ್ರೆಸ್ (ಐ) ಹಾಗೂ ಅದರ ಮಿತ್ರ ಪಕ್ಷಗಳು ಬೊಬ್ಬೆ ಹಾಕಲಾರಂಭಿಸಿತು. ಆದರೆ ಮದ್ರಾಸ್ ಹೈಕೋರ್ಟು ಅವರ ಈ ವಾದವನ್ನು ತಳ್ಳಿ ಹಾಕಿತು. ಇದರ ವಿರುದ್ಧ ಸರ್ವೋಚ್ಚ ನ್ಯಾಯಾಲಯಕ್ಕೆ ಅವರು ಅಪೀಲು ಹೋದರು.

ಕೇರಳದ ಆಯೋಗದ ಬಗ್ಗೆ ಯಾರೂ ಪ್ರಶ್ನಿಸಲಿಲ್ಲ. ಆದರೆ ತಮಿಳುನಾಡಿನ ಚೆಂಗಲ್‌ಪೇಟ್‌ನಲ್ಲಿರುವ ಪೋರಿಯೋನ್ ಕೆಮಿಕಲ್ಸ್‌ನ ಅಧಿಕಾರಿಗಳು ಕೇರಳದ ಆಯೋಗದ ವಿರುದ್ಧ ಸುಪ್ರೀಂ ಕೋರ್ಟಿನಲ್ಲಿ ಅಪೀಲು ಮಾಡಿ, ತಡೆಯಾಜ್ಞೆ ಗಳಿಸಿಕೊಂಡರು. ಈ ಕಂಪನಿಯೇ ಅಗಾಧ ಪ್ರಮಾಣದಲ್ಲಿ ಮದ್ಯಸಾರದ ಅಕ್ರಮ ಸಾಗಾಣಿಕೆಯ ಈ ಹಗರಣದಲ್ಲಿ ಸಿಲುಕಿಗೊಂಡಿದ್ದರಿಂದ ಸದಾಶಿವನ್ ಆಯೋಗದ ವಿಚಾರಣೆ ಎದುರಿಸುವುದನ್ನು ತಪ್ಪಿಸಲು ಅದು ಹೀಗೆ ಮಾಡಿತು. ಸುಪ್ರೀಂ ಕೋರ್ಟಿನ ಈ ತಡೆಯಾಜ್ಞೆಯನ್ನು ತೆರವು ಮಾಡಿಸುವ ಬದಲು, ಕರುಣಾಕರನ್ ಸರಕಾರ ಈಗ ಸದಾಶಿವನ್ ಆಯೋಗವನ್ನೇ ವಿಸರ್ಜನೆ ಮಾಡಿದೆಯೆಂಬ ಸುದ್ದಿ ಬಂದಿದೆ. ಅತ್ಯಂತ ಪ್ರಭಾವಶಾಲೀ ಅಬ್ಕಾರೀ ಕಂಟ್ರಾಕ್ಟರುಗಳ ಒತ್ತಡಕ್ಕೆ ಕರುಣಾಕರನ್ ಸರಕಾರ ಮಣಿದಿದೆಯೆಂಬುದು ಇದರಿಂದ ಸುಸ್ಪಷ್ಟ. ಅಲ್ಲದೆ ಈ ವಿಚಾರಣೆ ಮುಂದುವರಿದಿದ್ದರೆ ಈ ಅಬ್ಕಾರೀ ಕಂಟ್ರಾಕ್ಟರುಗಳಿಗೆ ಬೆಂಬಲ ಕೊಡುತ್ತಿದ್ದವರು ಯಾರು ಎಂಬುದೂ ಬೆಳಕಿಗೆ ಬರುತ್ತಿತ್ತು. ಇದರಿಂದ ತಪ್ಪಿಸಿಕೊಳ್ಳಲು ಸರಕಾರ ನಿಜವಾದ ಅಪರಾಧಿಗಳನ್ನು ಪತ್ತೆಹಚ್ಚುವ ತನ್ನ ಹೊಣೆಗಾರಿಕೆಯಿಂದ ಜಾರಿಕೊಂಡಂತಾಗಿದೆ. ಆದ್ದರಿಂದ ವಿಚಾರಣಾ ಆಯೋಗ ಮತ್ತೆ ತನ್ನ ಕೆಲಸ ಆರಂಭಿಸುವಂತೆ ಅನುವು ಮಾಡಿಕೊಡಬೇಕೆಂದು ಸಿ. ಪಿ. ಐ. [ಎಂ] ನ ಕೇರಳ ರಾಜ್ಯ ಸಮಿತಿಯ ಕಾರ್ಯದರ್ಶಿ ಅಚ್ಯುತನಂದನ್ ಒತ್ತಾಯ ಮಾಡಿದ್ದಾರೆ. ಸ್ಪಿರಿಟ್ ಹಗರಣದ ವಿಚಾರಣಾ ಆಯೋಗವನ್ನು ವಿಸರ್ಜಿಸಿ ಸರಕಾರ ನಿಜವಾದ ಅಪರಾಧಿಗಳನ್ನು ರಕ್ಷಿಸಲು ಯತ್ನಿಸಿದೆ ಎಂದು ಸಿ. ಪಿ. ಐ. ರಾಜ್ಯ ಮಂಡಳಿಯ ಕಾರ್ಯದರ್ಶಿ ಬಲರಾಮ್ ಹೇಳಿದ್ದಾರೆ. ಇತ್ತೀಚಿನ ವೈಪೀನ್ ಕಳ್ಳಭಟ್ಟಿ ದುರಂತದ ಅಪರಾಧಿಗಳನ್ನೂ ಇದೇ ರೀತಿಯಲ್ಲಿ ಉಳಿಸಲು ಸರಕಾರ ಪ್ರಯತ್ನಿಸಬಹುದೆಂದೂ ಅವರು ಅಪಾದಿಸಿದ್ದಾರೆ.

### ಮಧ್ಯಪ್ರದೇಶ

## "ನವಂಬರ್ ೮ ರಂದು ಕಲ್ಲಿದ್ದಲು ಗಣಿ ಬಂದ್"

ಮಧ್ಯಪ್ರದೇಶ, ಮಹಾರಾಷ್ಟ್ರ ಹಾಗೂ ಒರಿಸ್ಸಾಗಳಲ್ಲಿರುವ ವೆಸ್ಟರ್ನ್ ಕೋಲ್ ಫೀಲ್ಡ್ ಲಿಮಿಟೆಡ್‌ನ ಒಂದೂವರೆ ಲಕ್ಷ ಗಣಿ ಕಾರ್ಮಿಕರು ನವಂಬರ್ 8 ರಂದು ಮುಷ್ಕರ ನಡೆಸಲು ನಿರ್ಧರಿಸಿದ್ದಾರೆ. ಮಧ್ಯ ಪ್ರದೇಶದ ಕೋರ್ಬಾದಲ್ಲಿ ನಡೆದ ಕಾರ್ಮಿಕರ ಸಮಾವೇಶದಲ್ಲಿ ಈ ನಿರ್ಣಯ ಅಂಗೀಕಾರವಾದಾಗ ನೆರೆದಿದ್ದ ಕಾರ್ಮಿಕ ಪ್ರತಿನಿಧಿಗಳು ಹಾಗೂ ಕಾರ್ಮಿಕರು ಅದನ್ನು ಹರ್ಷೋದ್ಗಾರದಿಂದ ಸ್ವಾಗತಿಸಿದರು.

ಸಮಾವೇಶದಲ್ಲಿ ಬಿಪಿಇ ಯ ನಿರ್ದೇಶನಗಳಿಂದಾಗಿ ಬೇಡಿಕೆಗಳ ಬಗ್ಗೆ ಮಾತುಕತೆ ನಡೆಸುವಲ್ಲಿ ಅನಗತ್ಯ ವಿಳಂಬವಾಗುತ್ತಿರುವುದನ್ನು ಬಲವಾಗಿ ಪ್ರತಿಭಟಿಸಲಾಯಿತು. ಅಲ್ಲದೆ ಇಂಟಕ್ ಹಾಗೂ ಎಚ್.ಎಂ.ಎಸ್. [ಕುಲಕರ್ಣಿ ಗುಂಪು]ಗೆ ಪಕ್ಷಪಾತ ತೋರಿಸಿ ಕಲ್ಲಿದ್ದಲು ಕೈಗಾರಿಕೆಯ ಜಂಟೀ ದ್ವಿಪಕ್ಷೀಯ ಸಮಿತಿಯನ್ನು ರಚಿಸುವ ಭಾರತ ಸರಕಾರದ ಕ್ರಮವನ್ನು ತೀವ್ರವಾಗಿ ಖಂಡಿಸಲಾಯಿತು.

"ಆಠ್ ನವಂಬರ್ ಕೋ ಕ್ಯಾ ಹೋಗಾ — ಕೋಯಲಾ ಬದಾನ್ ಬಂದ್ ರಹೇಗಾ" ಎಂಬ ಘೋಷಣೆಯೊಂದಿಗೆ ಸಮಾವೇಶ ಕೊನೆಗೊಂಡಿತು. ಸಮಾವೇಶದ ನಂತರ ಕೋರ್ಬಾ ಕಲ್ಲಿದ್ದಲು ನಗರದ ರಸ್ತೆಗಳಲ್ಲಿ ಹೊರಟ ವರ್ಣಮಯ ಮೆರವಣಿಗೆ ಹಾಗೂ ನಂತರದ ಬೃಹತ್ ರ್‍ಯಾಲಿಯಲ್ಲಿ ಕಾರ್ಮಿಕರು ಅತ್ಯುತ್ಸಾಹದಿಂದ ಭಾಗವಹಿಸಿದರು.

## ಎಸ್. ಎ ಫ್. ಐ. ಚಟುವಟಿಕೆಗಳು

### ಬೆಂಗಳೂರು :

#### ಇರಾನಿ ವಿದ್ಯಾರ್ಥಿಗಳ ಮೇಲಿನ ಹಲ್ಲೆ ಖಂಡನೆ

ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಖೊಮೈನಿ ಸರ್ಕಾರದ ವಿರುದ್ಧ ನಡೆದ ಮೆರವಣಿಗೆಯ ಮೇಲೆ ಖೊಮೈನಿ ಪರ ವಿದ್ಯಾರ್ಥಿಗಳು ಹಲ್ಲೆ ನಡೆಸಿ ಅಮೀರ್ ಎಂಬ ವಿದ್ಯಾರ್ಥಿಯನ್ನು ಕೊಲೆ ಮಾಡಿರುವುದನ್ನು ಎಸ್. ಎಫ್. ಐ. ರಾಜ್ಯ ಸಮಿತಿ ಖಂಡಿಸಿದೆ. ಪ್ರಜಾಪ್ರಭುತ್ವ ರೀತಿಯಲ್ಲಿ ಪ್ರದರ್ಶನ ನಡೆಸುವಾಗ ಹಲ್ಲೆ ನಡೆಸುವುದು ಸರಿಯಲ್ಲವೆಂದು ತಿಳಿಸಿದೆ.

ಮುನ್ಸೂಚನೆಯಿದ್ದರೂ ಘರ್ಷಣೆಯನ್ನು ತಡೆಗಟ್ಟಲು ಪೋಲೀಸರು ವಿಫಲರಾದದು ರಾಜ್ಯ ಸಮಿತಿ ವಿಷಾದನೀಯವೆಂದು ತಿಳಿಸಿದೆ.

#### ಶೇಷಾದ್ರಿಪುರಂ ವಿದ್ಯಾರ್ಥಿಗಳ ಹೋರಾಟಕ್ಕೆ ಬೆಂಬಲ

ಬೆಂಗಳೂರಿನ ಶೇಷಾದ್ರಿಪುರಂ ಕಾಲೇಜಿನ ವಿದ್ಯಾರ್ಥಿಗಳು ಡೊನೇಷನ್ ಪದ್ಧತಿ, ಕಾಲೇಜು ಚುನಾವಣೆಗೆ ಒತ್ತಾಯಿಸಿ ನಡೆಸುತ್ತಿರುವ ಹೋರಾಟಕ್ಕೆ ರಾಜ್ಯ ಸಮಿತಿ ಬೆಂಬಲ ವ್ಯಕ್ತಪಡಿಸಿದೆ.

### ಹೂವಿನ ಹಡಗಲಿ :

ದಿನಾಂಕ 28—9—82 ರಂದು ಸ್ಥಳೀಯ ಘಟಕ "ನಿರುದ್ಯೋಗ ಸಮಸ್ಯೆ ಹಾಗೂ ಪರಿಹಾರ ಮಾರ್ಗಗಳು" ಎಂಬ ವಿಷಯ ಕುರಿತು ಭಾಷಣ ಕಾರ್ಯಕ್ರಮ ಏರ್ಪಡಿಸಿತ್ತು.

ಮುಖ್ಯ ಅತಿಥಿಗಳಾಗಿ ಹೊಸಪೇಟೆ ವಾಸವಿ ಹೈಸ್ಕೂಲ್ ಮುಖ್ಯೋಪಾಧ್ಯರಾದ ಶ್ರೀ ವೈ. ಭೀಮಸೇನಾಚಾರ್ ರವರು ಮಾತನಾಡಿದರು. ಸ್ಥಳೀಯ ವಕೀಲರಾದ ಎಂ. ಪಿ. ಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು. ಅನ್ವರ್ ಬಾಷ ಸ್ವಾಗತ ಕೋರಿದರು. ಕೊನೆಯಲ್ಲಿ ನಾಟಕ, ಕ್ರಾಂತಿಕಾರಿ ಗೀತೆಗಳ ಕಾರ್ಯಕ್ರಮ ನೀಡಿದರು.

### ಮಂಜೇಶ್ವರ :

#### ಡಿ.ಎಸ್. ಎಫ್. "ರಂಗಗ್ಕೆ ವಿಜಯ"

ಸ್ಥಳೀಯ ದಿ|| ರಾಷ್ಟ್ರಕವಿ ಮಂಜೇಶ್ವರ ಗೋವಿಂದಪೈ ಸ್ಮಾರಕ ಕಾಲೇಜು ಯೂನಿಯನಿಗೆ ನಡೆದ ಚುನಾವಣೆಯಲ್ಲಿ ಎಸ್.ಎಫ್.ಐ. ಹಾಗೂ ಎ.ಡಿ.ಎಸ್.ಎಫ್.ಗಳು ಕೂಡಿ "ಡಿ.ಎಸ್.ಎಫ್." ರಂಗ ರಚಿಸಿ ಎ.ಬಿ.ವಿ.ಪಿ.ಯ ಅಭ್ಯರ್ಥಿಗಳನ್ನು ಸೋಲಿಸಿ, ವಿಜಯಗಳಿಸಿದ್ದಾರೆ. ಪ್ರಾರಂಭದಿಂದ ಏಕಸ್ವಾಮ್ಯ ಸ್ಥಾಪಿಸಿದ ಎ. ಬಿ. ವಿ. ಪಿ.

(8ನೇ ಪುಟ ನೋಡಿ)

# ಸಿದ್ಧಾಂತ ಮತ್ತು ಸಾಂಸ್ಕೃತಿಕ ಚಳುವಳಿಗಳ ಪಾತ್ರ

ಎಸ್. ಎಸ್. ಹಿರೇಮಠ

ಎಡ ಮತ್ತು ಪ್ರಜಾಪ್ರಭುತ್ವೀಯ ಚಳುವಳಿಗಳ ಕೊರತೆಯ ಇತಿಹಾಸವಿರುವ ಕರ್ನಾಟಕದಲ್ಲಿ, ಇತ್ತೀಚಿನ ದಿನಗಳಲ್ಲಿ ಬೆಳವಣಿಗೆಯ ಶುಭ ಲಕ್ಷಣಗಳನ್ನು ಎಲ್ಲ ರಂಗಗಳಲ್ಲೂ ಕಾಣುತ್ತಿದ್ದೇವೆ. ಪ್ರಾಥಮಿಕ ಹಂತದಲ್ಲಿ ಆಗಬಹುದಾದ ಹಲವು ತೊಡರುಗಳನ್ನು ಸಾಮೂಹಿಕ ಸಂಘಟನೆಗಳು ಎದುರಿಸಬೇಕಾಗಿದೆ. ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಇವು ಸಹಜ. ಈ ಲೇಖನದ ವಿಚಾರವನ್ನು ಸಾಂಸ್ಕೃತಿಕ ಚಳುವಳಿಗಳಿಗೆ ಸೀಮಿತಗೊಳಿಸಿದ್ದೇನೆ.

ಜನತೆಯ ಕ್ರಾಂತಿಕಾರಿ ಪ್ರಗತಿಪರ ಸಂಸ್ಕೃತಿಯನ್ನು ಬೆಳೆಸುವುದಕ್ಕೆ ಸಾಂಸ್ಕೃತಿಕ ಸಂಘಟನೆಗಳ ಪಾತ್ರ ಬಹು ದೊಡ್ಡದಾಗಿರುತ್ತದೆ. ಆದರೆ ಈ ಸಂಘಟನೆಗಳ ಪಾತ್ರ ಪೂರಕವೂ ಸಾಪೇಕ್ಷವೂ ಆಗಿರುತ್ತದೆ.

ದೇಶದ ವಸ್ತುಸ್ಥಿತಿಯನ್ನು, ಪರಂಪರೆಯನ್ನು, ಖಚಿತವಾಗಿ, ವೈಜ್ಞಾನಿಕವಾಗಿ; ಜಾಗತಿಕ ಪ್ರಗತಿಶೀಲ ಜ್ಞಾನ ಶಕ್ತಿಯಾದ—ಮಾರ್ಕ್ಸ್‌ವಾದ-ಲೆನಿನ್‌ವಾದದ ಹಿನ್ನೆಲೆಯಲ್ಲಿ ಚಾರಿತ್ರಿಕವಾಗಿ ವಿಶ್ಲೇಷಿಸಿ, ವಿಮರ್ಶಿಸಿ, ದೇಶದ ಚಲನೆಯ ಗತಿಗಳನ್ನು ಗುರುತಿಸುತ್ತ, ಅದನ್ನು ತನ್ನದೆ ಆದ ಪ್ರಗತಿಪರ ಸಮಾಜವಾದಿ ಮೌಲ್ಯಗಳ ಗಳಿಕೆಯತ್ತ ಕೊಂಡೊಯ್ಯಲು, ಹೋರಾಟಕ್ಕೆ ಅಣಿ ನೆರೆಯಿಸುವ ಒಂದು ಕ್ರಾಂತಿಕಾರಕ ಪಕ್ಷವು ಇಡೀ ಶೋಷಿತ ಜನಕೋಟಿಯ, ಆಶಯ-ಆದರ್ಶಗಳನ್ನು, ಕನಸುಗಳನ್ನು ಸದಾ ಚಿಂತಿಸುತ್ತ, ಅದಕ್ಕಾಗಿ ಸತತ ಹೋರಾಡುತ್ತ ಮುಂಚೂಣಿಯಲ್ಲಿರುತ್ತದೆ. ಅದು ಕ್ರಾಂತಿಪಥದಲ್ಲಿ ಜನತೆಯನ್ನು ಹೆಜ್ಜೆ ಹೆಜ್ಜೆಯಾಗಿ ಕೊಂಡೊಯ್ಯುವ ಗುರುತರ ಜವಾಬ್ದಾರಿಯನ್ನು ಹೊತ್ತಿರುತ್ತದೆ. ಅದು ದೇಶದ ಎಲ್ಲ ರಂಗಗಳ, ಎಲ್ಲ ಘಟನೆಗಳ, ಎಲ್ಲ ವರ್ಗಗಳ ವಿಮರ್ಶೆ ಮಾಡುತ್ತ, ಬೌದ್ಧಿಕವಾಗಿಯೂ ಉನ್ನತ ಮಟ್ಟದಲ್ಲಿ, ಮುಂದುವರಿದ ದಿಕ್ಕಿನಲ್ಲಿರುತ್ತದೆ. ಇದಕ್ಕೆ ಪೂರಕವಾಗಿ, ಸಾಂಸ್ಕೃತಿಕ ಚಳುವಳಿಗಳನ್ನು ಹುಟ್ಟು ಹಾಕುವ ಸಾಂಸ್ಕೃತಿಕ ಸಂಘಟನೆಗಳು ಪರೋಕ್ಷವಾಗಿ ದುಡಿಯುತ್ತಿರುತ್ತವೆ.

ಬೆಂಗಳೂರಿನಲ್ಲಿ ಹಿಂದೆ ನಡೆದ ಬಂಡಾಯ ಸಾಹಿತ್ಯ ಶಿಬಿರದಲ್ಲಿ ಇ. ಎಂ. ಎಸ್. ನಂಬೂದಿರಿಪಾದ್ ಅವರು ಭಾಷಣ ಮಾಡುತ್ತ, ಬಂಡಾಯ ಲೇಖಕರಿಗೆ ಹಲವಾರು ಮಹತ್ವದ ಮಾರ್ಗದರ್ಶಿ ಮಾತುಗಳನ್ನು ಹೇಳಿದರು. "ಕೇರಳದಲ್ಲಿ ಮಾರ್ಕ್ಸ್‌ವಾದಿ ಲೇಖಕರೆನಿಸಿಕೊಂಡ ಕೆಲವರು ಉದಾರವಾದಿ ಲೇಖಕರಿಗಿಂತ ಹಿಂದೆ ಬಿದ್ದುದೇಕೆ? ಪ್ರಗತಿಶೀಲವಾದ ವಾಸ್ತವತೆಯ ಕಲಾತ್ಮಕತೆಗೆ ಗಮನಕೊಡಿ. ಜನರ ಹೋರಾಟಗಳನ್ನು ಅಭ್ಯಸಿಸಿ. ಅಂಥ ಕೃತಿ ರಚಿಸಿ. ಅವುಗಳನ್ನು ಉಪಯೋಗಿಸಿಕೊಳ್ಳಲು ನಮಗೆ (ಕ್ರಾಂತಿಕಾರಿ ರಾಜಕೀಯ ಪಕ್ಷಕ್ಕೆ) ಬಿಡಿ" ಎಂದರು ಅವರು.

ಕಮಿಟೆಡ್ ಸಾಹಿತ್ಯ ಮತ್ತು ಕಲೆಯ ವಿಭಿನ್ನ ರೂಪಗಳು ಬರಿ ಘೋಷಣೆಗಳಾಗುವ, ಅನೇಕ ಸೈದ್ಧಾಂತಿಕ ತಪ್ಪುಗಳನ್ನು ಮಾಡುವ ಕಲಾತ್ಮಕ ಜವಾಬ್ದಾರಿಯನ್ನು ಮರೆತಿರುವ ಕೃತಿಗಳಾಗಿ ಬಿಡಬಹುದು. ಮಾವೊ, ಕಾಡ್‌ವೆಲ್, ಗೋರ್ಕಿಯಂಥ ಮಾರ್ಕ್ಸ್‌ವಾದಿ ವಿಮರ್ಶಕರು ಇದರ ಬಗ್ಗೆ ಎಚ್ಚರಿಗೆ ನೀಡಿದ್ದಾರೆ.

ಸಾಂಸ್ಕೃತಿಕ ಸಂಘಟನೆಗಳು ಕ್ರಾಂತಿಕಾರಿ ಪಕ್ಷದ, ಬೆಳೆಯುತ್ತಿರುವ ಧೋರಣೆಗಳಿಂದ ದೂರ ಸರಿಯುವ ಅಪಾಯ ಮಾಡಿಕೊಂಡಾಗಲೂ ಅನೇಕ ಬಿಕ್ಕಟ್ಟು, ಸಮಸ್ಯೆ ಬರುತ್ತವೆ. ಕ್ರಾಂತಿಕಾರಿ ಪಕ್ಷವೆಂದರೆ ಜನತೆಯ ಕ್ರಾಂತಿಕಾರಿ ಸ್ವಭಾವದ ಕ್ರೋಢೀಕರಣವೇ (consolidation) ಆಗಿರುತ್ತದೆ. ರಾಜಕೀಯದ ಬಗ್ಗೆ ಆಸಕ್ತಿ ವಹಿಸಿರುವೆನೆಂದು ಹೇಳಿಕೊಂಡ ಬಂಡಾಯ ಸಾಹಿತ್ಯ ಸಂಘಟನೆಯ ಹಲವಾರು ಸಮಸ್ಯೆಗಳನ್ನು ಈ ಹಿನ್ನೆಲೆಯಲ್ಲಿ ಅರ್ಥೈಸಬೇಕಾಗಿದೆ.

ಇನ್ನೊಂದು ರೀತಿಯಿಂದ ಹೇಳಬೇಕೆಂದರೆ ದೇಶವನ್ನು, ಜನತೆಯನ್ನು, ಜಾಗತಿಕ ವಸ್ತುಸ್ಥಿತಿಗಳನ್ನು ವ್ಯವಸ್ಥಿತವಾಗಿ ಚಾರಿತ್ರಿಕವಾಗಿ, ವೈಜ್ಞಾನಿಕವಾಗಿ [ಸತ್ಯವನ್ನು ಅಳೆಯುವ ನಿಜವಾದ ಮಾನದಂಡಗಳೇ ಇವು] ವಿಶ್ಲೇಷಿಸುವ, ಒರೆಗೆ ಹಚ್ಚುವ, ಮತ್ತು ಜನತೆಯ ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ, ಹುಟ್ಟು ಹಾಕುವ, ಕ್ರಾಂತಿಕಾರಕ ರಾಜಕೀಯ ಪಕ್ಷದ ಧ್ಯೇಯ - ಧೋರಣೆಗಳನ್ನು ಅರಿಯದ, ಅವರ ಜತೆ ಸಂವಾದಿಸದ ಸಾಂಸ್ಕೃತಿಕ ಸಂಘಟನೆಗಳು ಕ್ರಾಂತಿಕಾರಕ ಪಥದಿಂದ ತಮ್ಮನ್ನು ದೂರಗೊಳಿಸುವ ಅಪಾಯಕ್ಕೆ ಒಡ್ಡಿಕೊಳ್ಳುವವು. ಈ ಹಿನ್ನೆಲೆಯಲ್ಲಿ "ಪ್ರಗತಿಶೀಲ ಚಳುವಳಿ"ಯನ್ನು ವಿಶ್ಲೇಷಿಸಬೇಕಾಗುತ್ತದೆ. ಕ್ರಾಂತಿಕಾರಕ ಪರಿಸ್ಥಿತಿಗಳಿಗೆ, ಬದಲಾಗುತ್ತಲಿರುವ ಸಾಮಾಜಿಕ ಅವಶ್ಯಕತೆಗಳಿಗೆ ತಕ್ಕಂತೆ, ತನ್ನ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸಿ, ಸಂಘಟನೆ ಉಳಿದುಕೊಂಡು, ಬೆಳೆದುಕೊಂಡು ಹೋಗಬೇಕಾದರೆ ಯಾವುದೇ ಸಾಂಸ್ಕೃತಿಕ ಸಂಘಟನೆ ಕ್ರಾಂತಿಕಾರಕ ಪರಿಸ್ಥಿತಿಯನ್ನು ಸತ್ಯಪೂರ್ಣವಾಗಿ ವಿಶ್ಲೇಷಿಸುವ ಕ್ರಾಂತಿಕಾರಿ ಪಕ್ಷದ ಸಿದ್ಧಾಂತದ, ನಿಕಟ ಪರಿಚಯ, ಸತತ ಚರ್ಚೆ ನಡೆಸಲೇಬೇಕು.

ಏಕೆಂದರೆ ಜನತೆಯ ಮಧ್ಯೆ ಸದಾಕಾಲ ಬದುಕುವ ಕ್ರಾಂತಿಕಾರಕ ರಾಜಕೀಯ ಕಾರ್ಯಕರ್ತರಷ್ಟು, ಸಂವಾದವನ್ನು ಸಾಂಸ್ಕೃತಿಕ ಸಂಘಟನೆಗಳು ಇಟ್ಟುಕೊಳ್ಳಲಸಮರ್ಥವಾಗಿರುತ್ತವೆ. (ಆದರೆ ಅದು ಅತ್ಯವಶ್ಯವಾಗಿರುತ್ತದೆ) ಏಕೆಂದರೆ ಈ ಸಂಘಟನೆಗಳ ಸ್ವರೂಪವೂ ಇತಿಮಿತಿಯೂ ಹಾಗಿರುತ್ತದೆ. ಇವು ಜನರಿಗೆ ರಾಜಕೀಯ ಮುಖಂಡತ್ವವನ್ನು ಕೊಡಲಾರವಷ್ಟೆ. ಆದರೆ ರಾಜಕೀಯ ಅಧಿಕಾರ ದುಡಿಯುವ ಜನತೆಯ ಕೈಗೆ ಬಂದಾಗಲಷ್ಟೇ ಸಮಾಜವಾದಿ ಸಂಸ್ಕೃತಿಯ (ಬೂರ್ಜ್ವಾ ಮಾನವೀಯತೆ [humanism] ಗಿಂತ ಉನ್ನತವಾದ ಮುಂದಿನ ಹೆಜ್ಜೆ ಇದು; ಈ ಬಗ್ಗೆ ಇನ್ನೊಂದು ಲೇಖನದಲ್ಲಿ ವಿವೇಚಿಸುವೆ) ಬೆಳವಣಿಗೆಗೆ ಪೂರ್ವಭಾವಿ ಅವಶ್ಯಕತೆ ಆಗಿರುತ್ತದೆ. ಆಗಲೂ ಸಾಂಸ್ಕೃತಿಕ ಸಂಘಟನೆಗಳ ಜವಾಬ್ದಾರಿ ಇನ್ನೊಂದು ರೀತಿಯಲ್ಲಿ ಮುಂದುವರಿದೇ ಇರುತ್ತದೆ.

ಸಾಂಸ್ಕೃತಿಕ ಸಂಘಟನೆಗಳ ಗುರುತರ ಜವಾಬ್ದಾರಿಯನ್ನು, ವ್ಯಾಪಕ ಸ್ವರೂಪದ ಕಾರ್ಯಾಚರಣೆಗಳ ಮಹತ್ವವನ್ನು ಗುರುತಿಸುತ್ತಲೇ ಅವುಗಳ ಇತಿಮಿತಿಯನ್ನು ಗುರುತಿಸಿಕೊಳ್ಳಬೇಕು.

ನಿರ್ದಿಷ್ಟ ಸಮಾಜದ ತಳಹದಿ ಪ್ರಾಯ ಆರ್ಥಿಕ ರಚನೆಯನ್ನು ರಾಜಕೀಯ ಅರ್ಥ ಶಾಸ್ತ್ರವನ್ನು, ವರ್ಗಗಳ ನಡುವಿನ ಸಂಬಂಧಗಳು, ವೈರುಧ್ಯ, ಘರ್ಷಣೆಗಳ ಸ್ವರೂಪ, ಕ್ರಾಂತಿಯ ಸ್ಥಿತಿ, ಜನತೆಯ ಮನೋಭಾವ, ಪ್ರಗತಿಯ ಗತಿಯೆ ಮೊದಲಾದ ಮಹತ್ವದ ಸಂಗತಿಗಳ ಕೂಲಂಕುಷ ಚರ್ಚೆಯನ್ನು ರಾಜಕೀಯ ಪಕ್ಷ ನಡೆಸುತ್ತ, ಅಂತರರಾಷ್ಟ್ರೀಯ, ರಾಷ್ಟ್ರೀಯ ಗತಿಸ್ಥಿತಿಗಳ ಹಿನ್ನೆಲೆಯಲ್ಲಿ, ಹೋರಾಟಗಳನ್ನು ಮುನ್ನಡೆಸುತ್ತಿರುತ್ತದೆ.

ಜನತೆಯ ಸಂಸ್ಕೃತಿಯ ಅಭ್ಯಾಸದಲ್ಲಿ ಮಗ್ನರಾಗಿರಬೇಕಾದ ಸಾಂಸ್ಕೃತಿಕ ಚಳುವಳಿಗಳ ಕಾರ್ಯಕರ್ತರಿಗೆ ಅನೇಕ ಜವಾಬ್ದಾರಿಗಳಿರುತ್ತವೆ.

ಆರ್ಥಿಕ ರಚನೆಯೂ ಅಲ್ಲದೆ, ಮೇಲ್ರಚನೆಗಳಾದ ರಾಜಕೀಯ, ಶಿಕ್ಷಣ, ಧರ್ಮ, ಕಾನೂನು, ಸಾಮಾಜಿಕ ಜೀವನ ರೀತಿ ನೀತಿಗಳ ಒಪ್ಪಂದವೇ ಆದ ಸಂಸ್ಕೃತಿಯಲ್ಲಿ, ಸಾಂಸ್ಕೃತಿಕ ಸಂಘಟನೆಗಳು ಆಸಕ್ತವಾಗಿರುತ್ತವೆ. ಎಂದಾಗ ಈ ಸಂಘಟನೆಗಳ ಗುರುತರ ಜವಾಬ್ದಾರಿಯ ಅರಿವಾಗಬಹುದು. ರಾಜಕೀಯ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಮುಂತಾದೆಲ್ಲ ಬದುಕಿನ ರಂಗಗಳಲ್ಲಿ ನಿಕಟ ಸಂಬಂಧ ಇದ್ದೇ ಇರುವುದರಿಂದ ಸಾಂಸ್ಕೃತಿಕ ಸಂಘಟನೆಗಳದು ಪೂರಕವಾದ ಸಾಪೇಕ್ಷ ಕೆಲಸ ಎಂದು ಹೇಳಲಾಗಿದೆ. ಈ ಮುಖ್ಯ ಅಂಶವೇ ಸಾಂಸ್ಕೃತಿಕ ಸಂಘಟನೆಗಳಿಗೂ ಕ್ರಾಂತಿಕಾರಕ ಪಕ್ಷಕ್ಕೂ ಇರಬೇಕಾದ ನಿಕಟ ಸಂಪರ್ಕ, ಸಂವಾದಗಳನ್ನು ಒತ್ತಿ ಹೇಳುವುದಕ್ಕೆ ತಳಹದಿಯಾಗಿದೆ. ತನ್ನ ಜವಾಬ್ದಾರಿಯನ್ನು ಗಂಭೀರವೂ, ಅರ್ಥಪೂರ್ಣವಾಗಿಯೂ ಹೆಚ್ಚಿಸಿಕೊಳ್ಳುತ್ತ, ಬಹು ವ್ಯಾಪಕವಾದ, ದೀರ್ಘಕಾಲಿಕವಾದ ಸಾಂಸ್ಕೃತಿಕ ಚಳುವಳಿಗಳನ್ನೂ ನಡೆಸುವುದು ಸಾಂಸ್ಕೃತಿಕ ಸಂಘಟನೆಗಳ ಕೆಲಸ. ಕ್ರಾಂತಿಸ್ಥಿತಿ ಬೆಳೆಸುವಲ್ಲಿ, ಕ್ರಾಂತಿಯ ನಂತರದಲ್ಲಿ, ಈ ಸಂಘಟನೆಗಳ ಪಾತ್ರ ವಿವಿಧ ಸ್ವರೂಪದ್ದಾಗಿರುತ್ತದೆ.

ಇದಕ್ಕಾಗಿ ಸಾಂಸ್ಕೃತಿಕ ಸಂಘಟನೆಗಳು, ತಾನು ಪ್ರತಿನಿಧಿಸುವೆನೆಂದುಕೊಂಡ, ಶೋಷಿತ ಜನವರ್ಗದ, ದುಡಿಯುವ ಜನತೆಯ ಸಾಂಸ್ಕೃತಿಕ ಪರಂಪರೆಯ ಅಭ್ಯಾಸವನ್ನು—ಆದಿಮಾನವನ ಕಾಲದಿಂದ, ವರ್ಗ ಸಮಾಜಗಳಾದ ಗುಲಾಮ, ಊಳಿಗಮಾನ್ಯ, ಬಂಡವಾಳಶಾಹಿ ವ್ಯವಸ್ಥೆಗಳಲ್ಲಿ ಹರಿದು ಬಂದ ಶೋಷಿತರ ಸಂಸ್ಕೃತಿ—ಅಭ್ಯಸಿಸಬೇಕಾಗುತ್ತದೆ. (ಉದಾ : "ಓಲ್ಗಾ ಗಂಗಾ"). ಪ್ರಸ್ತುತ ಕಾಲಘಟ್ಟದಲ್ಲಿ ಪ್ರಗತಿಶೀಲ ಕ್ರಾಂತಿಕಾರಿ ಪಕ್ಷದ ಸಾಮಾಜಿಕ ಅರ್ಥೈಸುವಿಕೆಯ ಹಿನ್ನೆಲೆಯಲ್ಲಿ ತನ್ನ ಜವಾಬ್ದಾರಿಯನ್ನು ಮುಂಕೊಂಡೊಯ್ಯುವ ಕಾರ್ಯಭಾರ ಅದಕ್ಕಿರುತ್ತದೆ. ಬೂರ್ಜ್ವಾ ಸಂಸ್ಕೃತಿಯನ್ನು, ಮಾನವೀಯತೆಯನ್ನು ಮೀರಿ ನಾಶಮಾಡಿ ಸಮತಾವಾದಿ ಸಂಸ್ಕೃತಿಗೆ ಬೆಳೆಯಬೇಕಾದರೆ ಕ್ರಾಂತಿಕಾರಿ ಕಾರ್ಮಿಕ ಸಂಸ್ಕೃತಿಯನ್ನು ನಿರಂತರ ಬೆಳೆಸುವುದು ಅದರ ಮೊಟ್ಟ ಮೊದಲ ಕರ್ತವ್ಯ ಆಗಿರುತ್ತದೆ.

ಇಷ್ಟೆಲ್ಲ ಹಿನ್ನೆಲೆಯಲ್ಲಿ ಕಲಾವಿದರಿಗೆ ಕೆಲವು ಸಂಗತಿಗಳನ್ನು ಹೀಗೆ ಸೂಚಿಸಬಹುದು; ಇದು ಅಷ್ಟೇನು ಒಳ್ಳೆಯ ಕ್ರಮವಾಗದಿದ್ದರೂ ಕೂಡ.

1) ಮಾನವಕುಲದ ಉಳಿವಿಗಾಗಿ, ವಿಶ್ವಶಾಂತಿಗಾಗಿ, ನ್ಯೂಟ್ರಾನ್ ಮುಂತಾದ ಮಾರಕ ಅಸ್ತ್ರಗಳ, ಸಾಮ್ರಾಜ್ಯಶಾಹಿ ಕುತಂತ್ರದ ವಿರುದ್ಧ ನಡೆಸುವ ಹೋರಾಟದಲ್ಲಿ ಬಂಡಾಯ ಲೇಖಕರ ಪಾತ್ರ, ಹೊಣೆ,

2) ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಶೋಷಿತ ಜನತೆ ನಡೆಸುತ್ತಿರುವ ಹೋರಾಟಗಳ ಅರಿವು (ಉದಾ: "ವಿಶ್ವ ಕಥಾಕೋಶ"ಗಳು)

3) ರಾಷ್ಟ್ರೀಯ ಮತ್ತು ರಾಜ್ಯದ ಜನಪರ ಚಳುವಳಿಗಳಲ್ಲಿ ಆಸಕ್ತರಾಗಿ, ಪಾಲ್ಗೊಂಡು, ತನ್ನ ಅರಿವನ್ನು ಹೆಚ್ಚಿಸಿಕೊಳ್ಳುತ್ತ, ಸೃಜನಶೀಲ ಕೃತಿ ನಿರ್ಮಾಣ,

4) ವರ್ಗರಹಿತ ಸಮಾಜವಾದಿ ರಾಷ್ಟ್ರಗಳ ಸಂಸ್ಕೃತಿಯ ಪ್ರಸಾರ.

ಇದಕ್ಕಾಗಿ

ಅ) ನಮ್ಮ ದೇಶದ ಪೂರೈಸಲಾಗದ ಸಾಂಸ್ಕೃತಿಕ ಚಳುವಳಿಗಳ ಜವಾಬ್ದಾರಿಯನ್ನು ಪೂರೈಸಲು—ಊಳಿಗಮಾನ್ಯ ಅವಶೇಷಗಳ ವಿರುದ್ಧ, ಮೌಲ್ಯ, ನೀತಿಗಳ ವಿರುದ್ಧ, ಜಾತಿ ಧರ್ಮ, ವಿಚ್ಛಿದ್ರಕಾರಕ ಶಕ್ತಿಗಳ ವಿರುದ್ಧ, ಪ್ರಜಾಪ್ರಭುತ್ವೀಯ, ಜಾತ್ಯಾತೀತ, ಸಮಾಜವಾದಿ ಮೌಲ್ಯ, ನೀತಿ, ತಿಳಿಸುವ ಕಾರ್ಯಕ್ರಮ ಹಾಕಿಕೊಳ್ಳುವುದು.

ಬ) ದುಡಿಯುವ ಶೋಷಿತ ಜನಸಮೂಹಗಳ ಸಾಂಸ್ಕೃತಿಕ ಪರಂಪರೆ (ಜನಪದ ಸಾಹಿತ್ಯ ವಾಙ್ಮಯದ ಅಭ್ಯಾಸ)ಯ ನಿರಂತರ ಶೋಧನೆ, ವಿಶ್ಲೇಷಣೆ, ಅಭ್ಯಾಸ.

ಕ) ಶೋಷಿತರ ಪೂರ್ವಗ್ರಹಗಳನ್ನು ಹಳತನ್ನು ಅಜ್ಞಾನವನ್ನು ನಾಶಮಾಡುವ ಹೋರಾಟಕ್ಕೆ ಸ್ಫೂರ್ತಿ ನೀಡುವ, ಪ್ರಗತಿಶೀಲವಾದ ಕ್ರಾಂತಿಕಾರಿ ಸಂಸ್ಕೃತಿಯ ಸ್ವರೂಪವನ್ನು ತುಂಬುವ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.

# ಕರ್ನಾಟಕ ರಾಜ್ಯದಲ್ಲಿ

(3ನೇ ಪುಟದಿಂದ)

ಸದಸ್ಯರು ಮಂಗಳೂರಿನ ಸೆನೇಟ್ ಸದಸ್ಯರಂತೆಯೇ ಪ್ರಾರಂಭದಲ್ಲಿ ಟೀಕೆ ಮಾಡಿ ಮಾಡಿ ಬೇಸತ್ತು ಬದಲಾವಣೆ ಸುಲಭದ ಕೆಲಸವಲ್ಲೆಂದು ಮನದಟ್ಟು ಮಾಡಿಕೊಂಡು "ಬಂದದ್ದುಣ್ಣೋ ಮಹಾರಾಯ" ಎಂದು ತಂತಮ್ಮ ಭತ್ತೆ ಸ್ವೀಕಾರ ಮಾಡುತ್ತ, ಅಲ್ಪ ಸ್ವಲ್ಪ ತಮ್ಮ "ಹಿತ" ಸಾಧಿಸಿಕೊಂಡು ಸುಮ್ಮಗಿದ್ದಾರೆ. ಮಂಗಳೂರಿನ ಸೆನೇಟ್ ಸದಸ್ಯರೂ ಇದೇ ದಾರಿಯಲ್ಲಿ ಮುಂದುವರಿಯುತ್ತಾರೆಂದು ಕಾಂಗ್ರೆಸ್ ಸರಕಾರ ಭಾವಿಸಿದೆ. "ದೇಣಿಗೆ ತೆಗೆದುಕೊಳ್ಳುತ್ತೇವೆ. ಹೊಸ ಶಾಲೆ-ಕಾಲೇಜುಗಳಿಗೆ ಪರ್ಮಿಟ್ ಕೊಡುತ್ತೇವೆ" ಇದು ಗುಂಡೂರಾವ್ ಸರಕಾರದ ಧ್ಯೇಯ. "ಹಣ ಪಡೆದು ಪಾಸು ಮಾಡುತ್ತೇವೆ" ಇದು ಪಿ. ಯು. ಸಿ., ವಿಶ್ವವಿದ್ಯಾನಿಲಯಗಳ ನಿಲುವು. ಹೀಗಿರುವಾಗ ಶಾಲೆ-ಕಾಲೇಜುಗಳ ಚಿಂತಾಜನಕ ಪರಿಸ್ಥಿತಿಯ ಕಡೆ ಗಮನ ಹರಿಸುವವರಾರು! ಸರಕಾರ ಬದಲಾಗಬೇಕು, ಸಮಾಜ ಬದಲಾಗಬೇಕು, ಇದಾಗಬೇಕಾದರೆ ಜನರಲ್ಲಿ ಹೊಸ ವಿಚಾರಧಾರೆ ಮೂಡಿಬರಬೇಕು. ಬುದ್ಧಿವಂತ ಧಾರವಾಡದವರಿಂದ ಅದು ಸಾಧ್ಯವಾಗಿಲ್ಲ. ಸುಶಿಕ್ಷಿತ, ವಿದ್ಯಾವಂತ ದಕ್ಷಿಣ ಕನ್ನಡದವರಿಂದ ಅದು ಸಾಧ್ಯವಾಗಬಹುದು. ವಿದ್ಯಾರ್ಥಿಗಳು, ಪಾಲಕರು ಸಂಘಟಿತರಾಗಿ ಹೋರಾಡುವ ಸೆನೇಟ್ ಸದಸ್ಯರಿಗೆ ಬೆಂಬಲ ಕೊಡಬೇಕು. ರೈತ – ಕಾರ್ಮಿಕರು ಅವರ ಬೆನ್ನೆಲುಬಾಗಿ ನಿಲ್ಲಬೇಕು. ನಮ್ಮ ಶಬ್ದಕೋಶದಲ್ಲಿ "ಅಸಾಧ್ಯ" ವೆಂಬುದಿಲ್ಲ. ಸಾಧನೆಗೆಬೇಕಾದ ಸಂಘಶಕ್ತಿ, ತಂತ್ರಬೇಕು. ಇವುಗಳ ಜೊತೆಯಲ್ಲಿ ಸಿದ್ಧಾಂತವೂ ಬೇಕು. ರೈತ–ಕಾರ್ಮಿಕ ವರ್ಗ ಇವುಗಳನ್ನೆಲ್ಲ ಒದಗಿಸುತ್ತದೆ. ಸೆನೇಟ್ ಸದಸ್ಯರು, ಸುಶಿಕ್ಷಿತ ವರ್ಗ ಅದರ ಉಪಯೋಗ ಮಾಡಿಕೊಂಡು ಹೋರಾಡಲಿ. ಮಂಗಳೂರಿನ ಸೆನೇಟ್ ಸದಸ್ಯರು ಕರ್ನಾಟಕದಾದ್ಯಂತ ಪ್ರಸರಿಸಿರುವ ಶಿಕ್ಷಣ ಸಂಸ್ಥೆಗಳ ಸುಧಾರಣೆಗೆ ಉತ್ತಮ ಶಿಕ್ಷಣ ಸಿಗುವಂತಾಗಲು ಸಹಾಯ ಮಾಡಲಿ. ಆ ರೀತಿ ಸಹಾಯ ಮಾಡುತ್ತಾರೆಂದು ಭಾವಿಸಲೇ? ಹಾಗಾದಲ್ಲಿ ವಿಶ್ವವಿದ್ಯಾಲಯಗಳ ಆಡಳಿತೆಯಲ್ಲಿ, ಶಿಕ್ಷಣ ಪದ್ಧತಿಯಲ್ಲಿ ನಿಜವಾಗಿಯೂ ಬದಲಾವಣೆ ಇರುವುದರಲ್ಲಿ ಸಂಶಯವಿಲ್ಲ.

## ದೊಡ್ಡ ಹಳ್ಳಿಯ ದೊಡ್ಡ ಸುದ್ದಿ

ಹೊಳೆನರಸೀಪುರ ತಾಲ್ಲೂಕಿನ ದೊಡ್ಡಹಳ್ಳಿಯಲ್ಲಿನಡೆದ ಗೋಲೀಬಾರ್ ಪ್ರಕರಣ ಹಿಂದಿನ ಹಲವಾರು ಪ್ರಕರಣಗಳಂತೆಯೇ ರಾಜ್ಯಾದ್ಯಂತ ಗಮನ ಸೆಳೆದಿದೆ. ಅದರಲ್ಲೂ ಈ ಮುಂಚೆ ಜನತಾ ಪಾರ್ಟಿಯ ಮುಖಂಡನಾಗಿದ್ದು ನರಗುಂದ ರೈತರ ಮೇಲೆ ಗೋಲೀಬಾರ್ ನಡೆದಾಗ ಗುಂಡೂರಾಯರ "ಒಳಗಿನ ಮಿತ್ರರ ಗುಂಪಿಗೆ" ಸೇರಿದವರೆಂದು ಹೇಳಿಸಿಕೊಂಡು, ಮುಖ್ಯ ಮಂತ್ರಿಯ "ಮೆಹರಬಾನಿ"ಯಿಂದ ಕಬ್ಬು ಬೆಳೆಗಾರನಾಗಿರದಿದ್ದರೂ, ಕಬ್ಬು ಬೆಳೆಗಾರರ ಪ್ರತಿನಿಧಿಯಾಗಿ ವಿದೇಶ ಪ್ರಯಾಣದ ರುಚಿಕಂಡ ದೇವೇಗೌಡರು, ಚುನಾವಣೆ ಸಮೀಪ ಬರುತ್ತಿದ್ದಂತೆ, ತಾನು ನಿಜವಾಗಿಯೂ ಕಾಂಗ್ರೆಸ್ ವಿರೋಧಿ ಎಂಬುದನ್ನು ತೋರ್ಪಡಿಸುವ ಹವಣಿಕೆಯಲ್ಲಿದ್ದಂತೆ ಕಂಡು ಬರುತ್ತದೆ. ಬೆಳಗಾವಿಯಲ್ಲಿ ಸೇರಿದ ಜನತಾ ಪಾರ್ಟಿಯ ಕಾರ್ಯಕರ್ತರ ಶಿಬಿರದಲ್ಲಿ ಕಮ್ಯುನಿಸ್ಟರನ್ನು ದೂರಮಾಡಬೇಕೆಂಬ ಭಾಷಣ ಮಾಡಿ ಬಿಜೆಪಿಯನ್ನು ಬಗಲೊಳಗೆ ಸೇರಿಸಿಕೊಳ್ಳುವ ಪ್ರಯತ್ನವನ್ನೂ ಮಾಡಿದ್ದರು.

ಆಂಧ್ರ ರಾಜ್ಯಕ್ಕಿಂತ ಕರ್ನಾಟಕದ ರಾಜಕೀಯ ಭದ್ರವಾಗಿದೆಯೆಂದು ಕಂಡು ಬಂದರೂ ಶ್ರೀಕಂಠಯ್ಯ ಮತ್ತು ಧರ್ಮಸಿಂಗ್ ಅವರ ಹೆಸರುಗಳು ಮುಂದಿನ ಮುಖ್ಯ ಮಂತ್ರಿಯ ಪಟ್ಟಿಯಲ್ಲಿ ಪ್ರಧಾನವಾಗಿ ಕಾಣ ಬರುತ್ತಿದೆಯೆಂದೂ, ರಾಜೀವಗಾಂಧಿಯ ಆಶೀರ್ವಾದ ಇವರಿಗಿದೆಯೆಂದೂ ಹಾರಿಕೆ ಸುದ್ದಿ ಕೇಳಿ ಬರುತ್ತದೆ. ಇಂಥ ಪರಿಸ್ಥಿತಿಯಲ್ಲಿ ಗುಂಡೂರಾಯರು ಮಾಡಿದ ಉಪಕಾರಕ್ಕೆ ದೇವೇಗೌಡರ ಪರೋಪಕಾರ ಬೇಕಲ್ಲ. ಧೀರ ದೇವೇಗೌಡರು ಈ ಕಾರಣದಿಂದಲೇ ತಮ್ಮ ರಾಜೀನಾಮೆಯನ್ನು ವಿಧಾನ ಸಭೆ ಸ್ಪೀಕರಿಗೆ ಕಳುಹಿಸಿಕೊಡದೆ ಗುಂಡೂರಾಯರಿಗೇನೇ ಕಳುಹಿಸಿದ್ದಾರೆ. ಸ್ಪೀಕರಿಗೆ ಕಳುಹಿಸಿದರೆ ವಾಪಸ್ ಪಡೆಯಲಿಕ್ಕಾಗುವುದಿಲ್ಲ. ಗುಂಡೂರಾಯರು ರಾಜೀನಾಮೆ ಪತ್ರವನ್ನು ಹರಿದು ಹಾಕಬಹುದು.

ಯಾವುದೇ ವಿಧಾನ ಸಭೆಯ ಮತಕ್ಷೇತ್ರದಲ್ಲಿ ಸರಕಾರೀ ಕಾರ್ಯಕ್ರಮಗಳಿದ್ದಾಗ ಆ ಕ್ಷೇತ್ರದ ಸದಸ್ಯರನ್ನೂ ಆಮಂತ್ರಿಸುವುದು ರೂಢಿಯಲ್ಲಿರುವ ಪದ್ಧತಿ. ಅದರಂತೆ ಅಧಿಕಾರಿಗಳು ದೇವೇಗೌಡರನ್ನು ಆಮಂತ್ರಿಸಬೇಕಾಗಿತ್ತು. ಆರೀತಿ ಕರೆಯದಿರುವುದು ಖಂಡನೀಯ. ಆ ಪ್ರದೇಶದ ರೈತರು ಪ್ರತಿಭಟಿಸಿದಾಗ ಗೋಳಿಬಾರು ಮಾಡಿದ್ದೂ ಅನ್ಯಾಯ. ಗೋಲೀಬಾರಿನ ನ್ಯಾಯಾಂಗ ವಿಚಾರಣೆಯಾಗಬೇಕು, ಗೋಲೀಬಾರಿಗೆ ಕಾರಣರಾದ ಶ್ರೀಕಂಠಯ್ಯನವರು ರಾಜೀನಾಮೆ ಕೊಡಬೇಕೆಂದು ಕೇಳುವುದೂ ಸರಿಯೆ. ಈ ಪ್ರಕರಣದಲ್ಲಿ ದೇವೇಗೌಡರು ಗುಂಡೂರಾವ್ ಪರ ನಾಟಕವಾಡುತ್ತಿದ್ದಾರೋ ಎಂಬ ಸಂಶಯ ಬರುತ್ತದೆ.

ಈ ಮುಂಚೆ ಮಂತ್ರಿ ಇಬ್ರಾಹಿಂ, ರೇಣುಕಾ ರಾಜೇಂದ್ರನ್ ಪ್ರಕರಣಗಳೆದ್ದಾಗ, ರಾಜ್ಯದ ಎಲ್ಲ ವಿರೋಧಿ ಪಕ್ಷಗಳು ಒಂದಾಗಿ ಅವರ ರಾಜೀನಾಮೆಗಾಗಿ ಜಂಟೀ ಹೋರಾಟ ನಡೆಸಿ ಎರಡೂ ಮಂತ್ರಿಗಳ ರಾಜೀನಾಮೆ ಪಡೆಯುವಲ್ಲಿ ಯಶಸ್ವಿಯಾಗಿರುವ ಸಂಗತಿ ದೇವೇಗೌಡರಿಗೆ ಗೊತ್ತಿರಬೇಕು. ಹಾಗಿರುವಾಗ ಗುಂಡೂರಾಯರಿಗೆ ರಾಜೀನಾಮೆ ಪತ್ರ ಸಲ್ಲಿಸುವ ನಾಟಕ ಮಾಡುವುದಕ್ಕಿಂತ ಎಲ್ಲ ವಿರೋಧಿ ಪಕ್ಷಗಳ ಜಂಟೀ ಚಳುವಳಿಯನ್ನು ಸಂಘಟಿಸಿ ಹೋರಾಟ ನಡೆಸಲು ಮುಖಂಡತ್ವ ಕೊಡುವ ಕ್ರಮವನ್ನು ದೇವೇಗೌಡರು ಅನುಸರಿಸಬೇಕಾಗಿತ್ತು. ಹಾಗೆ ಮಾಡದೆ ತನ್ನ ರಾಜೀನಾಮೆ ಪತ್ರವನ್ನು ಗೆಳೆಯ ಗುಂಡೂರಾಯರಿಗೆ ಕಳುಹಿಸಿ ನಾಟಕ ಮಾಡುವುದರಿಂದ ಮುಂಬರುವ ಚುನಾವಣಾ ಸಂದರ್ಭದಲ್ಲಿ ಜನತೆಯ ಸಂಯುಕ್ತ ಹೋರಾಟದ ಅವಕಾಶವನ್ನು ಕಳೆದುಕೊಂಡಂತಾಗುತ್ತದೆ. ಕಳೆದ ಎರಡೂವರೆ ವರ್ಷಗಳಲ್ಲಿ ವಿರೋಧ ಪಕ್ಷದವರು ಸಂಯುಕ್ತವಾಗಿ ನಡೆಸಿದ ಹೋರಾಟದ ಅನುಭವಗಳ ಪಾಠವನ್ನು ದೇವೇಗೌಡರು ಕಲಿಯದಿರುವುದು ಆಶ್ಚರ್ಯದ ಸಂಗತಿ.

ಕಾಂಗ್ರೆಸ್ ಪಕ್ಷದೊಳಗಿನ ಆಂತರಿಕ ಜಗಳದಲ್ಲಿ ದೇವೇಗೌಡರು ಗುಂಡೂರಾವ್ ಪರ ಪಾತ್ರವಹಿಸುತ್ತಿದ್ದಾರೆಂದು ಜನರು ಆಡುತ್ತಿರುವುದರಲ್ಲಿ ಸತ್ಯ ಸಂಗತಿ ಇದೆಯೇ ಎಂಬುದನ್ನು ಕಾದು ನೋಡೋಣ.

●

# ಸಂಕ್ಷಿಪ್ತ ಸಮಾಚಾರಗಳು

(2ನೇ ಪುಟದಿಂದ)

ಕಾರ್ಯದರ್ಶಿ ಕಾಂ। ಎ. ಇ. ಸುಬ್ರಮಣ್ಯಂ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಿ. ಐ. ಟಿ. ಯು. ರಾಜ್ಯ ಸಮಿತಿಯ ಅಧ್ಯಕ್ಷ ಕಾಂ। ಸೂರ್ಯನಾರಾಯಣರಾವ್ ಆಗಮಿಸಿದ್ದರು.

ಕಾಂ। ಸೂರಿಯವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಕೇಂದ್ರ ಸರಕಾರವು ಬಿ.ಪಿ.ಇ. ಮೂಲಕವಿಟ್ಟ ನಿರ್ದೇಶನ (ಉತ್ಪಾದನೆಗೆ ಸಂಬಂಧಪಟ್ಟ ವೇತನ; ತುಟ್ಟಿಭತ್ತೆ ಸೂಚ್ಯಂಕಕ್ಕೆ ರೂ. 1–30ಕ್ಕಿಂತ ಹೆಚ್ಚಿರಕೂಡದು; ವೇತನ ಒಪ್ಪಂದದ ಅವಧಿ 4 ವರ್ಷ ಇರಬೇಕು...ಇತ್ಯಾದಿ) ಗಳ ಕುರಿತು ಹೈದರಾಬಾದ್ ಸಮ್ಮೇಳನ ಚರ್ಚಿಸಿ ಕಾರ್ಯಕ್ರಮ ರೂಪಿಸಲಿರುವುದನ್ನು ವಿವರಿಸಿದರು. ಈ ಕಾರ್ಯಕ್ರಮಕ್ಕೆ ಅನುಗುಣವಾಗಿ ಐಕ್ಯ ಹೋರಾಟಕ್ಕೆ ಸಿದ್ಧರಾಗಲು ಬಿ.ಇ.ಎಲ್. ಕಾರ್ಮಿಕರಿಗೆ ಮನವಿ ಮಾಡಿದರು.

ನಂತರ ಕಾಂ। ವಿಭೂತಿಮಠ ಮತ್ತು ಕಾಂ। ಎಂ.ಎಸ್.ಸಿ.ರಾವ್ ಇವರುಗಳು ಸಭೆಯನ್ನುದ್ದೇಶಿಸಿ ಮಾತನಾಡಿದರು.

**ಕುಷ್ಟಗಿ :**

4-10–82 ರಂದು ರಾಯಚೂರು ಜಿಲ್ಲೆಯ ಕುಷ್ಟಗಿಯಲ್ಲಿ, ರೈತ ಸಂಘ ಮತ್ತು ದ. ಸಂ. ಸ. ಜಂಟೀ ನೇತೃತ್ವದಲ್ಲಿ ಕೆಲವು ಬೇಡಿಕೆಗಳಿಗಾಗಿ ಒತ್ತಾಯಿಸಿ ಬಿ. ಡಿ. ಓ. ಅವರಿಗೆ ಮನವಿ ಸಲ್ಲಿಸಲಾಯಿತು.

ಗುಡದೂರು, ಹಿರೇ ಮನ್ನಾಪೂರ ಮುಂತಾದ ಸುತ್ತಮುತ್ತಲಿನ ಗ್ರಾಮಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಆಗಮಿಸಿದ್ದರು. ಮನವಿ ಸಲ್ಲಿಸುವ ಮುನ್ನ ಮೆರವಣಿಗೆ ನಡೆಸಲಾಯಿತು.

ಬರಗಾಲ ಕಾಮಗಾರಿಯ ಪ್ರಾರಂಭ, ಐ.ಆರ್.ಡಿ.ಪಿ.ಯಲ್ಲಿ ಸಾಲ ಕೊಡುವುದು, ಜನತಾ ಮನೆಗಳನ್ನು ಹೆಚ್ಚಿಗೆ ಒದಗಿಸುವುದು...ಇತ್ಯಾದಿ ಅಂಶಗಳು ಮನವಿಯಲ್ಲಿದ್ದವು.

## ಸಾದರ ಸ್ವೀಕಾರ

### ಮಾರ್ಕ್ಸ್‌ವಾದ ಎಂದರೇನು?

ಲೇ: ಮೂಲ : ಎಸ್. ಇ. ಬಲರಾವ್ ಅನು: ಎಚ್.ಕೆ.ರಾಮಚಂದ್ರಮೂರ್ತಿ; ದ್ವಿತೀಯ ಮುದ್ರಣ 198; ಪುಟ : 71; ಬೆಲೆ: ರೂ. 2—00.

### ಪ್ರಜಾಪ್ರಭುತ್ವ ಮತ್ತು ಸಮಾಜವಾದಕ್ಕಾಗಿ ರಾಷ್ಟ್ರೀಯ ಏಕತೆ

ಲೇ: ಮೂಲ : ಎಸ್. ಜಿ. ಸರ್ದೇಸಾಯಿ; ಅನು: ಎಸ್.ವಿ.ವೇಳಣಕಾರ್; 1982; ಪುಟ 96 ; ಬೆಲೆ : ರೂ. 3-00.

### ಎಳೆಯರಿಗಾಗಿ ಮಾರ್ಕ್ಸ್‌ವಾದ

ಲೇ: ಮೂಲ: ಪಿ. ಟಿ. ಭಾಸ್ಕರ್ ಪಣಿಕ್ಕರ್; ಅನು: ಕೆ. ಚಂದ್ರಹಾಸ; 1982; ಪುಟ: 35; ಬೆಲೆ: ರೂ. 1—50.

### ಚಿತ್ರ ಕಥೆಗಳು

ಕಥೆ; ಎನ್. ಗೆರ್ನೆಟ್, ಎನ್. ದಿಲಾಕ್ತೊರ್ಸ್ಕಯ, ಡಿ. ಹಾರ್ಮ್ಸ್, ಚಿತ್ರಗಳು: ಎನ್. ರಾದ್ಲೋವ್; 1981, ಪುಟ: 48; ಬೆಲೆ: ರೂ. 2–00.

### ಲೆವ್ ತೋಲ್‌ಸ್ತೋಯ್

(ನೀಳ್ಗತೆಗಳು) ಅನು: ಕೆ. ಎಲ್. ಗೋಪಾಲಕೃಷ್ಣರಾವ್; 1981; ಪುಟ: 442; ಬೆಲೆ: ರೂ. 10-00.

### ಬೂದು ಕುದುರೆ

ಲೇ: ಎಂ. ಬುಲಾತೊವ್, ಚಿತ್ರಗಳು: ಟಿ. ಮಾವ್ರಿನ; 1981; ಪುಟ: 30; ಬೆಲೆ: ರೂ 2 – 00.

### ಮೀನುಗಾರ ಮತ್ತು ಹೊನ್ನ ಮೀನು

ಅನು: ಕೆ. ಎಲ್. ಗೋಪಾಲಕೃಷ್ಣರಾವ್, ಚಿತ್ರಗಳು : ಬರೀಸ್ ದೆಹ್‌ತೆರೆವ್; 1982; ಪುಟ: 16; ಬೆಲೆ : ರೂ. 2—00.

### ಹೊರಟಿತು ಇಲಿಮರಿ ನೀರನು ತರಲು

ಅನು: ಗೋಪಾಲಕೃಷ್ಣರಾವ್, ಚಿತ್ರಗಳು: ತತ್ಯಾನ ಬಲುಚಿನೆನ್; 1982: ಪುಟ: 24; ಬೆಲೆ: ರೂ. 1 – 50.

### ಕಾರ್ಲ್‌ಮಾರ್ಕ್ಸ್ ಬಂಡವಾಳದ ಉದ್ಭವ

ಅನು : ಕೆ. ಎಲ್. ಗೋಪಾಲಕೃಷ್ಣರಾವ್; 1981; ಪುಟ: 110; ಬೆಲೆ: ರೂ. 1—50.

### ಹೋಗಿ ಬಾ, ಗುಲ್ಸಾರಿ!

(ನೀಳ್ಗತೆ) ಮೂಲ: ಚಿಂಘೇಜ್ ಐತ್ಮಾತೊವ್, ಅನು : ಕೆ. ಎಲ್. ಗೋಪಾಲಕೃಷ್ಣರಾವ್; 1982; ಪುಟ: 376; ಬೆಲೆ: ರೂ. 5-00.

[ಈ ಮೇಲಿನ 10 ಪುಸ್ತಕಗಳ ಪ್ರ : ನವಕರ್ನಾಟಕ ಪಬ್ಲಿಕೇಷನ್ಸ್ (ಪ್ರೈ) ಲಿಮಿಟೆಡ್, ಮೆಜೆಸ್ಟಿಕ್ ವೃತ್ತ, ಬೆಂಗಳೂರು—9.]

# ಅಮನ್ ಕೀ ರಕ್ಷಾ ಕೌನ್ ಕರೇಗಾ ?
## ಹಮ್ ಕರೇಂಗೆ, ಹಮ್ ಕರೇಂಗೆ

ಅಮನ್ ಕೀ ರಕ್ಷಾ ಕೌನ್ ಕರೇಗಾ ?— ಹಮ್ ಕರೇಂಗೆ; ಹಮ್ ಕರೇಂಗೆ (ಶಾಂತಿಯನ್ನು ನಾವು ರಕ್ಷಿಸುವೆವು; ನಾವು ರಕ್ಷಿಸುವೆವು)— ಇದು ಅಕ್ಟೋಬರ್ 4 ರಂದು ದಹಲಿಯ ಬೀದಿಯಲ್ಲಿ ಮಾರ್ದನಿಗೊಂಡ ಘೋಷಣೆ.

ಆರು ಪಕ್ಷಗಳ ಮನವಿಗೆ ಓಗೊಟ್ಟು ದೇಶದ ಎಲ್ಲ ಮೂಲೆಗಳಿಂದ, ಎಲ್ಲ ಜನ ವಿಭಾಗಗಳನ್ನು ಪ್ರತಿನಿಧಿಸುವ ಸುಮಾರು ಐದು ಲಕ್ಷ ಜನರ ಜನ ಸಮೂಹ, ಸಾಮ್ರಾಜ್ಯವಾದಿಗಳ ಯುದ್ಧಖೋರ ನೀತಿಗೆ ತನ್ನ ಪ್ರತಿಭಟನೆ ವ್ಯಕ್ತಪಡಿಸಿತು. ವಿಶ್ವಶಾಂತಿಗೆ ಅಪಾಯ ತಂದೊಡ್ಡಿರುವ ಸಾಮ್ರಾಜ್ಯವಾದಿಗಳ ಕುತಂತ್ರದ ವಿರುದ್ಧ ಬೃಹತ್ ಪ್ರತಿಭಟನೆ ನಡೆಸಿ, ಭಾರತದ ಜನತೆ ಜಗತ್ತಿನ ಇತರ ಯುದ್ಧ ವಿರೋಧಿ ಜನತೆಯೊಂದಿಗೆ ಹೆಗಲುಕೊಟ್ಟಿತು. ನ್ಯೂಕ್ಲಿಯರ್ ಯುದ್ಧಕ್ಕಾಗಿ ಸಾಮ್ರಾಜ್ಯಶಾಹಿಗಳು ನಡೆಸುತ್ತಿರುವ ಸಿದ್ಧತೆಗಳನ್ನು ಕೊನೆಗೊಳಿಸಬೇಕೆಂದು ಒತ್ತಾಯಿಸಿ ಪ್ರಪಂಚದ ನಾನಾ ಭಾಗಗಳಲ್ಲಿ ಜನತೆ ನಡೆಸುತ್ತಿರುವ ಹೋರಾಟದೊಂದಿಗೆ ಭಾರತದ ಜನತೆ ಕೂಡ ಸೇರಿಕೊಳ್ಳುವ ಅವಕಾಶವನ್ನು ಅಕ್ಟೋಬರ್ 4ರ ಮತಪ್ರದರ್ಶನ ಒದಗಿಸಿತು.

ಅಕ್ಟೋಬರ್ 4 ರಂದು ನಡೆದ ಬೃಹತ್ ಮತಪ್ರದರ್ಶನಕ್ಕೆ ಪೂರಕವಾಗಿ ದೇಶದ ನಾನಾ ಕಡೆ ಮತಪ್ರದರ್ಶನಗಳು ನಡೆದವು. ಇವುಗಳಲ್ಲಿ ಸೆಪ್ಟೆಂಬರ್ 28 ರಂದು ಕಲ್ಕತ್ತದಲ್ಲಿ ನಡೆದ ಮತಪ್ರದರ್ಶನ ಬೃಹತ್ ಸ್ವರೂಪದ್ದೂ, ಅಪೂರ್ವವೂ ಆಗಿತ್ತು. ಕಲ್ಕತ್ತೆಯ ಜನತೆ ಈ ಹಿಂದೆ ಅನೇಕ ಮತಪ್ರದರ್ಶನಗಳನ್ನು ಕಂಡಿದೆ. ಸೆಪ್ಟೆಂಬರ್ 28 ರಂದು ನಡೆದ ಮತಪ್ರದರ್ಶನ ಇವುಗಳಲ್ಲಿ ಅತ್ಯಂತ ವೈಶಿಷ್ಟ್ಯಪೂರ್ಣವಾಗಿತ್ತು. 'ದಿ ಹಿಂದೂಸ್ತಾನ್ ಟೈಮ್ಸ್' ಪತ್ರಿಕೆಯ ವರದಿಯಂತೆ ಮತಪ್ರದರ್ಶನದಲ್ಲಿ ಪಾಲ್ಗೊಂಡವರ ಸಂಖ್ಯೆ ಅರ್ಧ ಮಿಲಿಯ.

ಕಲ್ಕತ್ತಾ ಮಹಾನಗರದ 13 ಕೇಂದ್ರಗಳಿಂದ ಮೆರವಣಿಗೆ ಪ್ರಾರಂಭವಾಗಿತ್ತು. ಕೇಂದ್ರದ ಶಹೀದ್ ಮೈದಾನದಲ್ಲಿ ಬಂದು ಸೇರಿದಾಗ, ಮುಖ್ಯಮಂತ್ರಿ ಕಾಂ| ಜ್ಯೋತಿ ಬಸು ಅವರು ಶಾಂತಿಯ ಸಂಕೇತವಾಗಿ ಐದು ಪಾರಿವಾಳಗಳನ್ನು ಹಾರಿಸಿದರು. ಮುಂದೆ ಹೋಚಿಮಿನ್ ಸರಣಿಯಲ್ಲಿ ಬಂದು ಅಲ್ಲಿರುವ ಅಮೇರಿಕನ್ ಕನ್ಸಲೇಟ್ ಕಚೇರಿಯಲ್ಲಿ ರೇಗನ್‌ರಿಗೆ ಕಳುಹಿಸಿಕೊಡುವಂತೆ ಒಂದು ಬಹಿರಂಗ ಪತ್ರ ನೀಡಲಾಯಿತು.

ಅಕ್ಟೋಬರ್ 1 ರಂದು ಆಂಧ್ರದ ವಿಜಯವಾಡಾ ನಗರದಲ್ಲಿ ನಡೆದ ಮತಪ್ರದರ್ಶನ ಅಪ್ರತಿಮವಾಗಿತ್ತು ಲಕ್ಷಾಂತರ ಜನತೆ ಈ ಯುದ್ಧವಿರೋಧಿ ಮತಪ್ರದರ್ಶನದಲ್ಲಿ ಪಾಲ್ಗೊಂಡಿತ್ತು. ದೇಶದ ಇತರೆಡೆ ಮೆರವಣಿಗೆ ನಡೆದಿರುವುದಾಗಿ ತಿಳಿದು ಬಂದಿದೆ.

ಕರ್ನಾಟಕ ರಾಜ್ಯದಲ್ಲೂ ಅಕ್ಟೋಬರ್ 4 ರಂದು ಯುದ್ಧ ವಿರೋಧಿ ಮೆರವಣಿಗೆ ನಡೆದವು. (ಬೆಂಗಳೂರು, ಮಂಗಳೂರು ಸುದ್ದಿಗಳು ಕಳೆದವಾರ ಪ್ರಕಟವಾಗಿವೆ). ಧಾರವಾಡದಲ್ಲಿ ಸಿ.ಪಿ.ಐ (ಎಂ) ನೇತೃತ್ವದಲ್ಲಿ ಮೆರವಣಿಗೆ ನಡೆಯಿತು. ಅಕ್ಟೋಬರ್ 4 ರಂದು ನಡೆದ ಈ ಮೆರವಣಿಗೆಯಲ್ಲಿ ಅವಳಿ ನಗರಗಳಾದ ಧಾರವಾಡ-ಹುಬ್ಬಳ್ಳಿಯ ಕಾರ್ಮಿಕ-ನೌಕರ-ವಿದ್ಯಾರ್ಥಿ-ಯುವಜನರ ಪ್ರತಿನಿಧಿಗಳು ಭಾಗವಹಿಸಿದ್ದರಲ್ಲದೆ ದಾಂಡೇಲಿ ಹಳಿಯಾಳ, ಹರಿಹರ, ರಾಣಿಬೆನ್ನೂರು, ಸೌದತ್ತಿ, ಬೆಳಗಾಂನ ಬೈಲಹೊಂಗಲಗಳಿಂದ ರೈತ ಕಾರ್ಮಿಕ ಪ್ರತಿನಿಧಿಗಳು ಭಾಗವಹಿಸಿದ್ದರು.

ದಾಂಡೇಲಿಯಿಂದ ಸುಮಾರು 70 ಜನ ಕಾರ್ಮಿಕ ಪ್ರತಿನಿಧಿಗಳು ಮತ್ತು ಸಿ. ಪಿ. ಐ. [ಎಂ] ಕಾರ್ಯಕರ್ತರು ಕಾಂ| ಮಂಜುನಾಥ ಪುಳಕರ, ಉಮೇಶ್ ನಾಯಕ್ ಮತ್ತಿತರರ ನೇತೃತ್ವದಲ್ಲಿ ಸೈಕಲ್ ಜಾಥಾಮೂಲಕ ಆಗಮಿಸಿದ್ದರು.

ವಿದ್ಯಾವರ್ಧಕ ಸಂಘದ ಎದುರು ನಡೆದ ಬಹಿರಂಗಸಭೆಯನ್ನುದ್ದೇಶಿಸಿ ಕಾಂ| ಹಳಕಟ್ಟಿ, ವಿ.ಜೆ.ಕೆ. ನಾಯರ್, ನಿತ್ಯಾನಂದಜೀ ಮತ್ತು ಸುಧೀಂದ್ರ ಕುಲಕರ್ಣಿ ಮತ್ತಿತರರು ಮಾತನಾಡಿ, ಸಾಮ್ರಾಜ್ಯಶಾಹಿಗಳು ಜಗತ್ತನ್ನು ವಿನಾಶದ ಅಂಚಿಗೆ ನೂಕುತ್ತಿರುವುದನ್ನು ತಪ್ಪಿಸಲು ಐಕ್ಯದಿಂದ ಹೋರಾಡಲು ಕರೆ ಕೊಟ್ಟರು.

ಅಕ್ಟೋಬರ್ ಎರಡರಂದು ಸಿ ಪಿ.ಐ., ಸಿ ಪಿ. ಐ. [ಎಂ] ಮತ್ತು ಇತರ ಸಾಮೂಹಿಕ ಸಂಘಟನೆಗಳ ನೇತೃತ್ವದಲ್ಲಿ ಬಹಿರಂಗ ಸಭೆ ನಡೆಯಿತು. ಇದರ ಅಂಗವಾಗಿ ವಿಚಾರಗೋಷ್ಠಿಯೊಂದನ್ನು ಏರ್ಪಡಿಸಲಾಗಿತ್ತು.

ಬಹಿರಂಗಸಭೆಯನ್ನುದ್ದೇಶಿಸಿ ಕಾಂ| ಎಸ್. ಕೆ. ಉಪಾಧ್ಯಾಯ, ಎಲ್. ಕೆ. ಚಂಚಲಕರ, ಭೀಮಶಿ ಕಲಾದಗಿ, ಪಿ. ಎಸ್. ಪಾಟೀಲ ಮತ್ತಿನ್ನಿತರರು ಮಾತನಾಡಿ ಸಾಮ್ರಾಜ್ಯಶಾಹಿಗಳ ಯುದ್ಧ ಪಿಪಾಸೆಯನ್ನು ಖಂಡಿಸಿದರು.

ಅಕ್ಟೋಬರ್ 4ರಂದು ಶಹಬಾದ್‌ನಲ್ಲಿ ಮೆರವಣಿಗೆ, ಬಹಿರಂಗಸಭೆಯನ್ನುದ್ದೇಶಿಸಿ ಕಾಂ| ಉಪಾಧ್ಯಾಯ ಮತ್ತು ಮಹಮ್ಮದ್ ಹಸನ್ ಖಾನ್ ಮಾತನಾಡಿದರು.

# ತೇಜಸ್ವಿನಿ ನಿರಂಜನ ವಿದೇಶಕ್ಕೆ 'ತಾಯಿನುಡಿ' ಬಳಗದಿಂದ ಬೀಳ್ಕೊಡಿಗೆ

ಹೆಚ್ಚಿನ ವ್ಯಾಸಂಗಕ್ಕಾಗಿ ಅಮೇರಿಕೆಗೆ ತೆರಳಿದ ಕು. ತೇಜಸ್ವಿನಿ ನಿರಂಜನ ಅವರ ಗೌರವಾರ್ಥ 'ತಾಯಿನುಡಿ' ಬಳಗದ ಆಶ್ರಯದಲ್ಲಿ 'ತಾಯಿನುಡಿ' ಬಳಗದಿಂದ ಸೆಪ್ಟೆಂಬರ್ 14 ರಂದು ಆತ್ಮೀಯ ಬೀಳ್ಕೊಡುಗೆ ಸಮಾರಂಭ ನಡೆಯಿತು.

'ತಾಯಿ ನುಡಿ' ಸಂಪಾದಕ ಶ್ರೀ ದತ್ತಾತ್ರೇಯ ಮೆಂಡನರು ಈ ಕಾರ್ಯಕ್ರಮವನ್ನು ವ್ಯವಸ್ಥೆಗೊಳಿಸಿದ್ದರು. ಕಾವ್ಯವನ್ನು ತನ್ನ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಮಾಡಿಕೊಂಡ ಕುಮಾರಿ ತೇಜಸ್ವಿನಿಯವರ ಬೇರೆಬೇರೆ ಇಂಗ್ಲೀಷ್ ಕಾವ್ಯ ಸಂಗ್ರಹ ಅನುವಾದ ಕೃತಿಗಳ ಬಗ್ಗೆ ಶ್ರೀ ಮೆಂಡನರು ಮಾತನಾಡಿದರು.

ಖ್ಯಾತ ಕಾದಂಬರಿಕಾರ ಶ್ರೀ ವ್ಯಾಸರಾಯ ಬಲ್ಲಾಳ, ಹಿರಿಯ ಕವಿ ಶ್ರೀ ವಿ ಜಿ.ಭಟ್, ಪ್ರಾಧ್ಯಾಪಕ ಚಿದಂಬರ ದೀಕ್ಷಿತ್, ಮುಂಬೈನಲ್ಲಿ ಕನ್ನಡ ಚಟುವಟಿಕೆಗಳಲ್ಲಿ ಆಸಕ್ತಿಯಿಂದ ದುಡಿಯುತ್ತಿರುವ ಶ್ರೀ ಎ. ಎಸ್. ಕೆ. ರಾವ್, ಆಕಾಶವಾಣಿಯ ಕನ್ನಡ ವಿಭಾಗದ ಅಧಿಕಾರಿ ಶ್ರೀ ಬಿ. ಎ. ಸನದಿ, ಪ್ರಾಧ್ಯಾಪಕಿ ಶ್ರೀಮತಿ ಸುನೀತ ಶೆಟ್ಟಿ ಮತ್ತು ಶ್ರೀ ಶಂಕರ ಹೆಜ್ಮಾಡಿ ಮೊದಲಾದವರು ಆಗಮಿಸಿದ್ದು ಕು. ತೇಜಸ್ವಿನಿಯವರಿಗೆ ಶುಭ ಕೋರಿದರು.

ಕೊನೆಯಲ್ಲಿ ಕು. ತೇಜಸ್ವಿನಿ ಅವರು ಮಾತನಾಡಿ ಕೃತಜ್ಞತೆ ಸೂಚಿಸಿದರು.

# ಎಸ್.ಎಫ್.ಐ. ಚಟುವಟಿಕೆ

(5ನೇ ಪುಟದಿಂದ)

ಸೋತು ಈ ಬಾರಿ ಪುರೋಗಾಮಿ ವಿದ್ಯಾರ್ಥಿ ಸಂಘಟನೆಗಳ ಪ್ರಬಲ ಪ್ರತಿರೋಧವನ್ನು ಎದುರಿಸಬೇಕಾಯಿತು.

ವಿಜಯಿ ಅಭ್ಯರ್ಥಿಗಳು :

ಕಾಂ| ಪಿ. ವಿ. ಜಯಶಂಕರ್ [ಎಸ್. ಎಫ್. ಐ.][ಯೂನಿವರ್ಸಿಟಿ ಕೌನ್ಸಿಲ್] ಎಸ್. ಎ. ಕುಮಾರನ್ ಫೈನಾರ್ಟ್ಸ್ ಕ್ಲಬ್ ಸೆಕ್ರೆಟರಿ [ಎಸ್. ಎಫ್. ಐ.] 2ನೇ ಫ್ರೀ ಡಿಗ್ರಿಯ ತರಗತಿಯ ನಾಯಕನಾಗಿ ಕಾಂ|| ಅಜೀತಕುಮಾರ್, ಯೂನಿಯನ್ ಕಾರ್ಯದರ್ಶಿಯಾಗಿ ಕಾಂ| ರಾಮಕೃಷ್ಣ ಶೆಟ್ಟಿಗಾರ [ಎ. ಐ. ಎಸ್. ಎಫ್.] ಚುನಾವಣೆ ಫಲಿತಾಂಶ ಹೊರಬಿದ್ದ ನಂತರ ವಿದ್ಯಾರ್ಥಿಗಳು ನಗರದಲ್ಲಿ ಮೆರವಣಿಗೆ ನಡೆಸಿ ಬಹಿರಂಗ ಸಭೆ ನಡೆಸಿದರು.

○

# ಸರಕಾರವೂ ತನ್ನ ಕಾಣಿಕೆ ಸಲ್ಲಿಸಿದೆ

(1ನೇ ಪುಟದಿಂದ)

ಮಾಡುವುದರ ಬದಲು ಭಿಂದರನ್‌ವಾಲೆಯ ಮೇಲೆ ಆರೋಪ ಹೊರಿಸಿರುವುದು ಮತ್ತು ಆಗಸ್ಟ್ ಅಂತ್ಯದಲ್ಲಿ ಬಹುಪಾಲು ಅಕಾಲಿಗಳನ್ನು ಬಂಧಿಸಿರುವುದು—ಇವೆಲ್ಲವೂ ರಾಜಕೀಯ ಎಳಸುತನವನ್ನು ತೋರುತ್ತಾ ತೀವ್ರಗಾಮಿಗಳಿಗೆ ಅನುಕೂಲ ಮಾಡಿಕೊಡುತ್ತಿವೆ. ವಾಸ್ತವವಾಗಿ ತೀವ್ರಗಾಮಿಗಳ ಚಟುವಟಿಕೆಯ ವಿರುದ್ಧ ಸರ್ಕಾರ ಹಾಗೂ ಆಳುವ ಪಕ್ಷ ಯಾವುದೇ ಪ್ರಯತ್ನ ಮಾಡಿಲ್ಲ.

ನಮ್ಮ ಪಕ್ಷವು ಸಿಖ್ ತೀವ್ರಗಾಮಿಗಳನ್ನು ವಿರೋಧಿಸಿ ಅವರ ರಾಷ್ಟ್ರ ವಿರೋಧಿ ಚಟುವಟಿಕೆಗಳನ್ನು ಬಯಲಿಗೆಳೆದಿದೆ. ಅದರೊಂದಿಗೆ ಅಕಾಲಿಗಳಿಗೂ ಎಚ್ಚರಿಕೆ ನೀಡಿದೆ. ಸರಿಯಾಗಿ ವ್ಯವಹರಿಸುವುದರಿಂದ ಅಕಾಲಿಗಳೂ ಸಿಖ್ ತೀವ್ರಗಾಮಿಗಳನ್ನು ದೂರವಿಡುವುದರ ಬಗ್ಗೆ ತಿಳಿದಾರು. ಇದಕ್ಕೆ ನಿಮ್ಮ ಕಡೆಯಿಂದಲೂ ಧೈರ್ಯದ ಹೆಜ್ಜೆ ಇಡಬೇಕಾಗಿದೆ.

ಪಂಜಾಬಿನ ಪ್ರಮುಖ ವಿರೋಧ ಪಕ್ಷವಾದ ಅಕಾಲಿದಳವು ನ್ಯಾಯಯುತವಾಗಿಯೇ ಕೆಲವು ಬೇಡಿಕೆಗಳನ್ನಿರಿಸಿದೆ. ಇದರಲ್ಲಿ ಆರು ಬೇಡಿಕೆಗಳು ಎಲ್ಲಾ ಪಂಜಾಬಿಗಳಿಗೆ ಸಂಬಂಧಿಸಿದ್ದು ಉಳಿದ ನಾಲ್ಕು ಅಲ್ಪ ಸಂಖ್ಯಾತ ಸಿಖ್ ಧರ್ಮೀಯರ ಕುರಿತಾದದ್ದು. ಹೆಚ್ಚಿನ ಬೇಡಿಕೆಗಳ ಬಗ್ಗೆ ಪಂಜಾಬಿಗಳು ತೀವ್ರ ಆಸಕ್ತಿ ವಹಿಸಿದ್ದಾರೆ. ಸಕಾಲದಲ್ಲಿ ಈ ಬೇಡಿಕೆಗಳನ್ನು ಈಡೇರಿಸದೆ ಹೋದಲ್ಲಿ ಅತೃಪ್ತಿಯನ್ನು ತಮ್ಮ ಅನುಕೂಲಕ್ಕೆ ತೀವ್ರಗಾಮಿಗಳು ಬಳಸಿಕೊಳ್ಳಬಹುದು. ಈಗಾಗಲೇ ಕೇಂದ್ರ ಸರ್ಕಾರದ ಉದಾಸೀನ ಪ್ರವೃತ್ತಿಯಿಂದ ಜನತೆಯಲ್ಲಿ ಅತೀವ ಅಸಂತೃಪ್ತಿ ಉಂಟಾಗಿದೆ.

ನೆರೆಯಲ್ಲಿನ ಪಾಕಿಸ್ತಾನವು ಅಮೆರಿಕನ್ ಶಸ್ತ್ರಾಸ್ತ್ರಗಳಿಂದ ಸಜ್ಜಾಗುತ್ತಿರುವುದರ ಹಿನ್ನಲೆಯಲ್ಲಿ ಗಮನಿಸಿದಾಗ ಸಿಖ್ ತೀವ್ರಗಾಮಿಗಳಿಗೆ ಹೆಚ್ಚಿನ ಅವಕಾಶ ನೀಡುವುದು ಅಪಾಯಕಾರಿಯಾಗಿದೆ.

ಪ್ರತ್ಯೇಕತಾ ಶಕ್ತಿಯನ್ನು ಎದುರಿಸಲು, ತೀವ್ರಗಾಮಿಗಳ ಚಟುವಟಿಕೆ ಕುರಿತು ಹೇಳಿಕೆ ನೀಡಿ, ಎಲ್ಲಾ ಪಕ್ಷಗಳ ಸಭೆಯನ್ನು ಕರೆಯಿರೆಂದು ನಾನು ಈ ಮೂಲಕ ಒತ್ತಾಯಿಸುತ್ತೇನೆ. ಪಂಜಾಬ್ ಜನತೆಯ ಬೇಡಿಕೆಗಳ ಬಗ್ಗೆಯೂ ವಿಳಂಬ ಮಾಡದೆ ಕೂಡಲೇ ಪರಿಹರಿಸಿ ತೀವ್ರಗಾಮಿಗಳನ್ನು ಮೂಲೆಗುಂಪುಮಾಡಿ ಪಂಜಾಬಿ ಜನತೆಯ ಐಕ್ಯತೆಯನ್ನು ಕಾಪಾಡುವುದು ಪ್ರಸ್ತುತದ ಮುಖ್ಯ ಅಗತ್ಯತೆಯಾಗಿದೆ. ಪರಿಸ್ಥಿತಿ ಇನ್ನಷ್ಟು ಹದಗೆಡದಂತೆ ಸರಿಯಾದ ದಿಕ್ಕಿನಲ್ಲಿ ಅಗತ್ಯವಾದ ಕ್ರಮಗಳನ್ನು ನೀವು ಕೈಗೊಳ್ಳುವಿರೆಂದು ತಿಳಿಯುತ್ತೇನೆ.

ಶೀಘ್ರ ಮರುತ್ತರವನ್ನು ನಿರೀಕ್ಷಿಸುತ್ತೇನೆ. ವಂದನೆಗಳೊಂದಿಗೆ

ಹರಿಕಿಷನ್ ಸಿಂಗ್ ಸುರ್ಜಿತ್

## ಹರಿಹರ :
# ಪಾಲಿಫೈಬರ್ಸ್ ಆಡಳಿತ ವರ್ಗಕ್ಕೆ ಮುಷ್ಕರದ ನೋಟೀಸು

ಹರಿಹರದ ಎರಡು ಪ್ರಮುಖ ಉದ್ದಿಮೆಗಳಲ್ಲೊಂದು ಪಾಲಿಫೈಬರ್ ಕಾರ್ಖಾನೆ. ಬಿರ್ಲಾರ ಗ್ವಾಲಿಯರ್ ರೇಯಾನ್ಸ್ ಪಲ್ಪ್ ಯೂನಿಟ್ ಇದು. ಇಲ್ಲಿಯ ಕೆಲಸಗಾರರು ಕೆಲವು ಬೇಡಿಕೆಗಳನ್ನು ಮುಂದಿರಿಸಿದ್ದರು [27-7-82] ಕೆಲವು ಸುತ್ತಿನ ಮಾತುಕತೆಗಳಾದರೂ ಇದುವರೆಗೂ ಸುಮುಖ ಇತ್ಯರ್ಥಕ್ಕೆ ಬರಲಾಗಲಿಲ್ಲ.

ಪ್ರಸಕ್ತದಲ್ಲಿ ಕೆಲಸಗಾರರು ಪಡೆಯುತ್ತಿರುವ ಕನಿಷ್ಟ ವೇತನ ರೂ. 449. ಮತ್ತು ಸೂಚ್ಯಂಕ ಒಂದಕ್ಕೆ 69 ಪೈಸೆ ತುಟ್ಟಿಭತ್ತೆ. ಪಕ್ಕದ ಮೈಸೂರು ಕಿರ್ಲೋಸ್ಕರ್ ಕಾರ್ಖಾನೆಯಲ್ಲಿ ಕೆಲಸಗಾರರು ಪಡೆಯುತ್ತಲಿರುವ ಕನಿಷ್ಟ ವೇತನ ರೂ. 628. ಬೆಲೆ ಸೂಚ್ಯಂಕ ಒಂದಕ್ಕೆ ರೂ. 1.30 ರಂತೆ ತುಟ್ಟಿಭತ್ತೆ.

27-7-82 ರಂದು ಆಡಳಿತ ವರ್ಗಕ್ಕೆ ಸಲ್ಲಿಸಿರುವ ಬೇಡಿಕೆ ಪತ್ರದಲ್ಲಿ ಕನಿಷ್ಟ ವೇತನ 800 ರೂ. ಇರಬೇಕು ಎಂಬುದು ಪ್ರಮುಖ ಬೇಡಿಕೆ ಹಾಗೂ ತುಟ್ಟಿಭತ್ತೆ ಬೆಲೆ ಸೂಚ್ಯಂಕ ಒಂದಕ್ಕೆ ರೂ. 1.30 ಕೊಡುವಂತೆ ಕೇಳಲಾಗಿದೆ. ಆದರೆ ಪಾಲಿಫೈಬರ್ ಆಡಳಿತ ವರ್ಗ ತನ್ನ ಹಠಮಾರಿತನದಿಂದಾಗಿ ಒಪ್ಪಂದಕ್ಕೆ ಮುಂಬರುತ್ತಿಲ್ಲ.

ಕಳೆದ ಐದು ವರ್ಷದ ಅವಧಿಯಲ್ಲಿ ಕಾರ್ಖಾನೆ ಗಳಿಸಿದ ಲಾಭದ ಮೊತ್ತವೆಷ್ಟು ಗೊತ್ತೇ ? 'ಕೇವಲ' 22 ಕೋಟಿ ರೂ.

12-10-82 ರಂದು ಯೂನಿಯನ್ನಿನ ಅಧ್ಯಕ್ಷ ಕಾಂ| ವಿ. ಜೆ ಕೆ. ನಾಯರ್ ಅಧ್ಯಕ್ಷತೆಯಲ್ಲಿ ಕಾರ್ಮಿಕರ ಸರ್ವಸದಸ್ಯರ ಸಭೆ ನಡೆದು ಆಡಳಿತ ವರ್ಗಕ್ಕೆ ಮುಷ್ಕರದ ನೋಟೀಸು ಕೊಡುವಂತೆ ತೀರ್ಮಾನಿಸಲಾಯಿತು. ಸಭೆಗೆ ಮುನ್ನ ಕಾರ್ಮಿಕರ ಬೃಹತ್ ಮೆರವಣಿಗೆ ನಡೆಯಿತು.

ಸಭೆಯನ್ನುದ್ದೇಶಿಸಿ ಮಾತನಾಡಿದ ಕಾಂ| ವಿ. ಜೆ. ಕೆ. ಕಾರ್ಮಿಕರು ಐಕ್ಯತೆಯನ್ನು ಕಾಪಾಡಿಕೊಂಡು ಹೋರಾಟಕ್ಕೆ ಸನ್ನದ್ಧರಾಗಲು ಮನವಿ ಮಾಡಿದರು.

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053. Editorial and managerial office :L-56, K. V. Temple Street ,Sultanpet, Bangalore-560 053. Phone-24134, Prited at Ravee Traders, No. 8/1, J. M. Lane, Balepet Cross, Bangalore-560 053. EDITOR : M, K. BHAT.